# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೨೬, ಮಾರ್ಚ್, ೨೦೨೬(ಚೈತ್ರ, ೦೫, ಶಕವರ್ಷ, ೧೯೪೮)<br>BENGALURU, THURSDAY , 26, MARCH, 2026(CHAITHRA, 05, SHAKAVARSHA, 1948) | ನಂ. ೨೩೯<br>No. 239 |
|---|---|---|


## ಕರ್ನಾಟಕ ಸರ್ಕಾರ

ಸಂಖ್ಯೆ: ಎಲ್‌ಡಿ 413 ಎಲ್‌ಇಟಿ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ
ಡಾ. ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ:26/03/2026.

## ಅಧಿಸೂಚನೆ

ಕರ್ನಾಟಕ ಸರ್ಕಾರವು, ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ, 72)ರ ಪ್ರಕರಣ 28ರ ಉಪ-ಪ್ರಕರಣ (1)ರ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ನಿಯಮಗಳು, 2025ರ ಕರಡನ್ನು ದಿನಾಂಕ: 30.6.2025ರ ಕರ್ನಾಟಕ ರಾಜ್ಯಪತ್ರದ ಭಾಗದಲ್ಲಿ ಅಧಿಸೂಚನೆ ಸಂಖ್ಯೆ: ಎಲ್‌ಡಿ 413 ಎಲ್‌ಇಟಿ 2023, ದಿನಾಂಕ: 30.06.2025ರ ಮೂಲಕ ಪ್ರಕಟಿಸಿದ್ದು, ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಅದನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು(30) ದಿನಗಳೊಳಗಾಗಿ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಆಹ್ವಾನಿಸಿರುವುದರಿಂದ;

ಮತ್ತು ಸದರಿ ರಾಜ್ಯಪತ್ರವು 30.6.2025 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಈ ಬಗ್ಗೆ ಸ್ವೀಕರಿಸಿದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸಿರುವುದರಿಂದ;

ಈಗ, ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ, 72)ರ ಪ್ರಕರಣ 28ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

### ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ನಿಯಮಗಳು, 2025 ಎಂದು ಕರೆಯತಕ್ಕದ್ದು.

(2) ಇವು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ಅಧಿನಿಯಮ"** ಎಂದರೆ, ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ ಸಂಖ್ಯೆ 72);

(ಬಿ) **"ಮೇಲ್ಮನವಿ ಪ್ರಾಧಿಕಾರ"** ಎಂದರೆ, 22ನೇ ಪ್ರಕರಣದ 10ನೇ ಉಪ-ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಿದ ಪ್ರಾಧಿಕಾರ;

(ಸಿ) **"ಅಧಿಕೃತ ವ್ಯಕ್ತಿ"** ಎಂದರೆ, 11ನೇ ನಿಯಮದ (3)ನೇ ಉಪ ನಿಯಮದ ಅಡಿಯಲ್ಲಿ ಮೇಲ್ಮನವಿ ಪ್ರಕರಣಗಳನ್ನು ಕುರಿತು ವ್ಯವಹರಿಸುವುದಕ್ಕೆ ಮಂಡಳಿಯು ಅಧಿಸೂಚಿಸಿದ ಅಧಿಕೃತ ವ್ಯಕ್ತಿ;

(ಡಿ) **"ಅಧ್ಯಕ್ಷರು"** ಎಂದರೆ, ಮಂಡಳಿಯ ಅಧ್ಯಕ್ಷರು;

(ಇ) **"ಕುಂದುಕೊರತೆಗಳನ್ನು ನಿವಾರಿಸುವ ಅಧಿಕಾರಿ"** ಎಂದರೆ, 22ನೇ ಪ್ರಕರಣದ (7)ನೇ ಉಪ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಿದ ಪ್ರಾಧಿಕಾರಿ;

(ಎಫ್) **"ಸದಸ್ಯ"** ಎಂದರೆ, ಮಂಡಳಿಯ ಸದಸ್ಯ;

(ಜಿ) **"ಪ್ರಕರಣ"** ಎಂದರೆ, ಅಧಿನಿಯಮದ ಪ್ರಕರಣ; ಮತ್ತು

(ಹೆಚ್) **"ವಿಶೇಷ ಆಹ್ವಾನಿತ"** ಎಂದರೆ, ಮಂಡಳಿಯ ಸಭೆಯಲ್ಲಿ ಭಾಗವಹಿಸಲು ಆಹ್ವಾನಿಸಿದ ತಾಂತ್ರಿಕ ಜ್ಞಾನ ಹೊಂದಿರುವ ಅಥವಾ ವಿಷಯ ತಜ್ಞರಾಗಿರುವ ಆದರೆ ಯಾವುದೇ ಮತದಾನ ಮಾಡುವ ಅಧಿಕಾರವಿರದ ಒಬ್ಬ ವ್ಯಕ್ತಿ;

(2) ಈ ನಿಯಮಗಳಲ್ಲಿ ಬಳಸಲಾಗಿರುವ, ಆದರೆ ಪರಿಭಾಷಿಸದೇ ಇರುವ ಇತರ ಎಲ್ಲಾ ಪದಗಳು ಮತ್ತು ಪದಾವಳಿಗಳು ಈ ಅಧಿನಿಯಮದಲ್ಲಿ ಅವುಗಳಿಗೆ ಗೊತ್ತುಪಡಿಸಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ಮಂಡಳಿಯ ನಾಮನಿರ್ದೇಶಿತ ಸದಸ್ಯರ ಭತ್ಯೆಗಳು.-** (1) ಮಂಡಳಿಯ ಸದಸ್ಯತ್ವದಲ್ಲಿ ಖಾಲಿ ಹುದ್ದೆ ಸಂಭವಿಸಿದಾಗ ಅಥವಾ ಸಂಭವಿಸುವ ಸಾಧ್ಯತೆಯಿದ್ದಾಗ, ಸದಸ್ಯ ಕಾರ್ಯದರ್ಶಿಯು ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ಅಂತಹ ವರದಿಯನ್ನು ಸ್ವೀಕರಿಸಿದ ತರುವಾಯ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಖಾಲಿ ಸ್ಥಾನವನ್ನು ಭರ್ತಿ ಮಾಡಲು ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶಿತಗೊಂಡ ವ್ಯಕ್ತಿಯು ತಾನು ಯಾರ ಸ್ಥಾನಕ್ಕೆ ನಾಮನಿರ್ದೇಶಿತನಾಗಿರುವನೋ ಆ ಸದಸ್ಯರ ಹುದ್ದೆಯ ಉಳಿದ ಅವಧಿಗೆ ಅಧಿಕಾರ ವಹಿಸಿಕೊಳ್ಳತಕ್ಕದ್ದು.

(2) ಸರ್ಕಾರಿ ಪ್ರತಿನಿಧಿಗಳನ್ನು ಹೊರತುಪಡಿಸಿ, ಸಭೆಗೆ ಹಾಜರಾಗುವ ಅಧ್ಯಕ್ಷರು ಮತ್ತು ಸದಸ್ಯರಿಗೆ ರಾಜ್ಯ ಸರ್ಕಾರದ ಗ್ರೂಪ್-ಎ ಅಧಿಕಾರಿಗಳಿಗೆ ಅನ್ವಯವಾಗುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಾವತಿಸತಕ್ಕದ್ದು.

(3) ಮಂಡಳಿಯ ಸಭೆಗಳ ಉಪವೇಶನ ಶುಲ್ಕವು ಸರ್ಕಾರೇತರ ಸದಸ್ಯರಿಗೆ ಪ್ರತಿ ಸಭೆಗೆ ರೂ.3000/- ಮತ್ತು ಸರ್ಕಾರಿ ಅಧಿಕಾರಿಯಲ್ಲದ ಪ್ರತಿಯೊಬ್ಬ ವಿಶೇಷ ಆಹ್ವಾನಿತರಿಗೆ ರೂ.1000/- ಆಗಿರತಕ್ಕದ್ದು.

**4. ಮಂಡಳಿಯ ಸಭೆಗಳ ಸಮಯ, ಸ್ಥಳ ಮತ್ತು ಕಾರ್ಯವಿಧಾನ.** (1) ಮಂಡಳಿಯು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾದ ಪ್ರತಿಯೊಂದು ವಿಷಯವನ್ನು ಮಂಡಳಿಯ ಸಭೆಯಲ್ಲಿ ಪರಿಗಣಿಸತಕ್ಕದ್ದು ಅಥವಾ ಅಧ್ಯಕ್ಷರು ಸದಸ್ಯರ ನಡುವೆ ನಿರ್ಣಯವನ್ನು ಪರಿಚಲನೆ ಮಾಡುವ ಮೂಲಕ ಪರ್ಯಾಲೋಚನೆಗೆ ತೆಗೆದುಕೊಳ್ಳುವಂತೆ ನಿರ್ದೇಶಿಸಿದರೆ, ಆ ವಿಷಯವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ನಿರ್ಣಯವನ್ನು ಸರಳ ಬಹುಮತದ ಮೂಲಕ ಅಂಗೀಕರಿಸತಕ್ಕದ್ದು ಮತ್ತು ಆ ವಿಷಯದ ಕುರಿತು ಸದಸ್ಯರಲ್ಲಿ ಒಮ್ಮತ ಮೂಡದಿದ್ದ ಪಕ್ಷದಲ್ಲಿ ಹಾಗೂ ಸದಸ್ಯರ ಮತಗಳು ಸಮಾನವಾಗಿ ವಿಭಜನೆಯಾದ ಪಕ್ಷದಲ್ಲಿ, ಅಧ್ಯಕ್ಷರ ಮತವು ನಿರ್ಣಾಯಕವಾದುದಾಗಿರತಕ್ಕದ್ದು.

**ವಿವರಣೆ.-** ಮೇಲಿನ ಉಪಬಂಧದ ಉದ್ದೇಶಕ್ಕಾಗಿ "ಅಧ್ಯಕ್ಷರು" ಎಂಬ ಪದವು ಸಭೆಯ ಅಧ್ಯಕ್ಷತೆ ವಹಿಸಲು 4ನೇ ನಿಯಮದ (3)ನೇ ಉಪ-ನಿಯಮದ ಅಡಿಯಲ್ಲಿ ನಾಮನಿರ್ದೇಶಿತರಾದ ಅಥವಾ ಆಯ್ಕೆಯಾದ ಸದಸ್ಯರನ್ನು ಒಳಗೊಳ್ಳತಕ್ಕದ್ದು.

(2) ಮಂಡಳಿಯು, ಅಧ್ಯಕ್ಷರು ಸದಸ್ಯ ಕಾರ್ಯದರ್ಶಿಯೊಂದಿಗೆ ಸಮಾಲೋಚಿಸಿ ನಿರ್ಧರಿಸಬಹುದಾದಂಥ ಸ್ಥಳಗಳಲ್ಲಿ ಮತ್ತು ಅಂಥ ಸಮಯಗಳಲ್ಲಿ ಸಭೆ ಸೇರತಕ್ಕದ್ದು, ಆದರೆ ಕನಿಷ್ಠ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.

(3) ಅಧ್ಯಕ್ಷರು ತಾವು ಹಾಜರಿರುವ ಮಂಡಳಿಯ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳತಕ್ಕದ್ದು ಮತ್ತು ಅವರ ಗೈರುಹಾಜರಿಯಲ್ಲಿ, ಅವರು ತಮ್ಮ ಸ್ಥಾನದಲ್ಲಿ ಅಂಥ ಸಭೆಯ ಅಧ್ಯಕ್ಷತೆ ವಹಿಸಲು ಮಂಡಳಿಯ ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು ಮತ್ತು ಅಧ್ಯಕ್ಷರು ನಾಮನಿರ್ದೇಶನ ಮಾಡದಿರುವ ಸಂದರ್ಭದಲ್ಲಿ, ಸಭೆಯಲ್ಲಿ ಹಾಜರಿರುವ ಮಂಡಳಿಯ ಸದಸ್ಯರು ತಮ್ಮ ಪೈಕಿ ಒಬ್ಬರನ್ನು ಸಭೆಯ ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡಬಹುದು.

ಪರಂತು, ಅಲ್ಲಿ ಕೋರಂ ಇರತಕ್ಕದ್ದು. ಕನಿಷ್ಠ ಶೇಕಡ 50 ಪದನಿಮಿತ್ತ ಸದಸ್ಯರು, ಕನಿಷ್ಠ ಶೇಕಡ 50 ಸೇವಾ ಸಂಯೋಜಕರು/ಕಾರ್ಯ ವೇದಿಕೆಗಳ ನಾಮನಿರ್ದೇಶಿತ ಪ್ರತಿನಿಧಿಗಳು ಮತ್ತು ಕನಿಷ್ಠ ಶೇಕಡ 50 ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ನಾಮನಿರ್ದೇಶಿತ ಪ್ರತಿನಿಧಿಗಳು ಹಾಜರಿರುವ ಹೊರತು ಕೋರಂ ಪೂರ್ಣವಾಗತಕ್ಕದ್ದಲ್ಲ.

(4) ಸಭೆಗೆ ಎರಡು ವಾರಗಳ ಮೊದಲು ಸದಸ್ಯರಿಗೆ ನೋಟಿಸ್ ನೀಡಬೇಕು. ಆದಾಗ್ಯೂ, ಅಧ್ಯಕ್ಷರು, ಅಗತ್ಯವಿದ್ದರೆ ಒಂದು ತಿಂಗಳ ಮೊದಲು ದೀರ್ಘ ನೋಟಿಸ್ ನೀಡಬಹುದು.

(5) ಸಭೆಯಲ್ಲಿ ಎತ್ತಬಹುದಾದ ಹೆಚ್ಚುವರಿ ವಿಷಯಗಳನ್ನು ಚರ್ಚಿಸಲು ಅಧ್ಯಕ್ಷರು ಅನುಮತಿ ನೀಡಿದ ಹೊರತು, ಸಭೆಯ ಕಾರ್ಯಸೂಚಿಯಲ್ಲಿ ಪಟ್ಟಿ ಮಾಡಲಾದ ವಿಷಯಗಳನ್ನು ಮಾತ್ರ ಚರ್ಚಿಸತಕ್ಕದ್ದು.

(6) ಅಧ್ಯಕ್ಷರು, ತುರ್ತು ಸಂದರ್ಭದಲ್ಲಿ ತುರ್ತು ಚರ್ಚೆಯ ವಿಷಯ ಮತ್ತು ಕಾರಣದ ಬಗ್ಗೆ ಸದಸ್ಯರಿಗೆ ಮುಂಚಿತವಾಗಿ ತಿಳಿಸಿದ ನಂತರ, ಯಾವುದೇ ಸಮಯದಲ್ಲಿ ಮಂಡಳಿಯ ವಿಶೇಷ ಸಭೆಯನ್ನು ಕರೆಯಬಹುದು.

(7) ರಾಜ್ಯ ಸರ್ಕಾರವು ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಯಾರೇ ಸದಸ್ಯನನ್ನು,-

**ಐ.** ಆತನು ಲಿಖಿತ ಮಾಹಿತಿ ನೀಡದೆ ಮತ್ತು ಅಧ್ಯಕ್ಷರ ಒಪ್ಪಿಗೆ ಪಡೆಯದೆ ಮಂಡಳಿಯ ಸತತ ಮೂರು ಸಭೆಗಳಿಗೆ ಗೈರು ಹಾಜರಾದರೆ; ಅಥವಾ

**ಜೆ**. ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಸದಸ್ಯರು ಮಂಡಳಿಯಲ್ಲಿ ಯಾವ ಹಿತಾಸಕ್ತಿಯನ್ನು ಪ್ರತಿನಿಧಿಸುವರೆಂದು ತಾತ್ಪರ್ಯವಾಗುವುದೋ ಆ ಹಿತಾಸಕ್ತಿಯನ್ನು ಪ್ರತಿನಿಧಿಸುವುದು ನಿಂತುಹೋದರೆ,

- ಮಂಡಳಿಯ ಸಭೆಯಲ್ಲಿ ಭಾಗವಹಿಸದಂತೆ ನಿಷೇಧಿಸಬಹುದು.

**5. ಜಮಾ ಖರ್ಚು ಮತ್ತು ಇತರ ಸಂಬಂಧಿತ ದಾಖಲೆಗಳು ಒಳಗೊಂಡಂತೆ, ಸೂಕ್ತ ಲೆಕ್ಕಪತ್ರಗಳು, ವಾರ್ಷಿಕ ಲೆಕ್ಕ ವಿವರಣಾಪಟ್ಟಿಗಳ ನಿರ್ವಹಣೆ.-** (1) ಮಂಡಳಿಯ ಲೆಕ್ಕಪತ್ರ ವರ್ಷವು ಏಪ್ರಿಲ್ 1ನೇ ದಿನಾಂಕದಿಂದ ಮುಂದಿನ ವರ್ಷದ ಮಾರ್ಚ್ 31ರವರೆಗೆ ಆಗಿರತಕ್ಕದ್ದು.

(2) ಅಧಿನಿಯಮದ ಪ್ರಕರಣ 3ರ ಅಡಿಯಲ್ಲಿ ರಚಿಸಲಾದ ಮಂಡಳಿಯು ಆದಾಯೇತರ ಸಂಸ್ಥೆಯಾಗಿದ್ದು, ಅಧಿನಿಯಮದ ಪ್ರಕರಣ 19ರ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಮತ್ತು ನಿಯಮ 18ರಲ್ಲಿ ವಿವರಿಸಲಾದಂತೆ ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಶುಲ್ಕ ನಿಧಿಗೆ ಜಮೆಯಾಗುವ ಕ್ಷೇಮಾಭಿವೃದ್ಧಿ ಶುಲ್ಕ/ನಿಧಿಗಳು/ ಸ್ವೀಕೃತಿಗಳನ್ನು ಮಂಡಳಿಯ ಆದಾಯವೆಂದು ಪರಿಗಣಿಸತಕ್ಕದ್ದಲ್ಲ.

(3) ಮಂಡಳಿಯು ತನ್ನ ಲೆಕ್ಕಪತ್ರ ಪುಸ್ತಕಗಳ ನಿರ್ವಹಣೆಯಲ್ಲಿ ಮತ್ತು ವಾರ್ಷಿಕ ಹಣಕಾಸು ವಿವರಪಟ್ಟಿಯನ್ನು ಸಂಕಲಿಸುವಲ್ಲಿ ನಗದು ಆಧಾರಿತ ಲೆಕ್ಕಪತ್ರ ಪದ್ಧತಿಯನ್ನು ಅನುಸರಿಸತಕ್ಕದ್ದು.

(4) ಮಂಡಳಿಯು, ಮಂಡಳಿಯ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ ನಿರ್ವಹಿಸತಕ್ಕದ್ದು ಮತ್ತು ವರ್ಷಕ್ಕೊಮ್ಮೆ ಮಂಡಳಿಯು ನೇಮಿಸಿದ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ನಡೆಸತಕ್ಕದ್ದು.

(5) ಮಂಡಳಿಯ ವಾರ್ಷಿಕ ಲೆಕ್ಕಪತ್ರಗಳ ವಿವರಪಟ್ಟಿಯು ಅನುಮೋದಿತ ನಮೂನೆಯಂತೆ ಮತ್ತು ರಾಜ್ಯದ ಮಹಾಲೇಖಪಾಲರೊಂದಿಗೆ ಸಮಾಲೋಚಿಸಿದಂತೆ ಇರತಕ್ಕದ್ದು.

(6) ಮಂಡಳಿಯು ಪ್ರತಿ ವರ್ಷ ಏಪ್ರಿಲ್ 30ರ ಮೊದಲು ಲೆಕ್ಕಪರಿಶೋಧಕರ ವರದಿಯ ಪ್ರತಿಯೊಂದಿಗೆ ವಾರ್ಷಿಕ ಲೆಕ್ಕಪತ್ರಗಳ ವಿವರಪಟ್ಟಿಯ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(7) ರಾಜ್ಯ ಸರ್ಕಾರವು ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸಿದ ನಂತರ, ಅದು ಸೂಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ಮಂಡಳಿಗೆ ನೀಡಬಹುದು ಮತ್ತು ಮಂಡಳಿಯು ಅಂತಹ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

(8) ಮಂಡಳಿಯು ನಗದು ರಿಜಿಸ್ಟರ್, ಆಸ್ತಿ ರಿಜಿಸ್ಟರ್ ಮತ್ತು ಎಲ್ಲಾ ಸಂಬಂಧಿತ ಮತ್ತು ಅನುಮೋದಿತ ಲೆಕ್ಕಪತ್ರ ಪುಸ್ತಕಗಳನ್ನು ನಿರ್ವಹಿಸತಕ್ಕದ್ದು.

(9) ಮಂಡಳಿಯು ನೋಂದಾಯಿತ ವೇದಿಕೆಗಳು, ಗಿಗ್ ಕಾರ್ಮಿಕರ ಮತ್ತು ಕ್ಲೇಮುಗಳ ಡಿಜಿಟಲ್ ಡೇಟಾಬೇಸ್ ಅನ್ನು ಸುರಕ್ಷಿತವಾಗಿ ನಿರ್ವಹಿಸಬೇಕು.

(10) ಮಂಡಳಿಯು ಅಗತ್ಯವೆಂದು ಪರಿಗಣಿಸುವಂಥ ಇತರ ದಾಖಲೆಗಳು ಮತ್ತು ರಿಜಿಸ್ಟರ್‌ಗಳನ್ನು ನಿರ್ವಹಿಸಬಹುದು.

**6. ಮಂಡಳಿಯು ಲೆಕ್ಕಪರಿಶೋಧನೆ ವರದಿಯನ್ನು ಸಲ್ಲಿಸುವ ದಿನಾಂಕ.-** ಮಂಡಳಿಯು ಪ್ರತಿ ವರ್ಷ ಏಪ್ರಿಲ್ 1ರ ನಂತರ ಮತ್ತು ಡಿಸೆಂಬರ್ 31ಕ್ಕೂ ಮೊದಲು, ಆದಷ್ಟು ಬೇಗನೆ, ಲೆಕ್ಕಪತ್ರಗಳ ಲೆಕ್ಕಪರಿಶೋಧಿತ ಪ್ರತಿಗಳು ಮತ್ತು ಲೆಕ್ಕಪರಿಶೋಧಕರ ವರದಿಯೊಂದಿಗೆ, ಆ ವರ್ಗದ ಮಾರ್ಚ್ 31ರಂದು ಕೊನೆಗೊಳ್ಳುವ ಹಿಂದಿನ ವರ್ಷದಲ್ಲಿನ ಮಂಡಳಿಯ

ಕಾರ್ಯನಿರ್ವಹಣೆಯ ಬಗ್ಗೆ ಅಗತ್ಯಪಡಿಸಬಹುದಾದಂಥ ವಾರ್ಷಿಕ ವರದಿಯ ಸಾಫ್ಟ್ ಮತ್ತು ಹಾರ್ಡ್ ಪ್ರತಿಗಳನ್ನು ಕರ್ನಾಟಕ ರಾಜ್ಯ ವಿಧಾನ ಮಂಡಲಕ್ಕೆ ಸಲ್ಲಿಸತಕ್ಕದ್ದು.

**7. ಮಂಡಳಿಯಿಂದ ಸೇವಾ ಸಂಯೋಜನಕಾರರ ಅಥವಾ ವೇದಿಕೆಯ ನೋಂದಣಿ.-** (1) ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಯೊಬ್ಬ ಸೇವಾ ಸಂಯೋಜನಕಾರರು ಅಥವಾ ವೇದಿಕೆಯು ಅಧಿನಿಯಮದ ಪ್ರಕರಣ 11(1)ರ ಪ್ರಕಾರ ಮಂಡಳಿಯು ಗೊತ್ತುಪಡಿಸಿದ ವೆಬ್ ಪೋರ್ಟಲ್‌ನಲ್ಲಿ ಸ್ವತಃ ನೋಂದಾಯಿಸಿಕೊಳ್ಳಬೇಕು.

(2) ನೋಂದಣಿ ಸಮಯದಲ್ಲಿ, ಸೇವಾ ಸಂಯೋಜನಕಾರ (aggregator) ಅಥವಾ ವೇದಿಕೆಯು ಗೊತ್ತುಪಡಿಸಲಾದ ವೆಬ್ ಪೋರ್ಟಲ್‌ನಲ್ಲಿ ಈ ಕೆಳಗಿನ ವಿವರಗಳನ್ನು ಅಪ್‌ಲೋಡ್ ಮಾಡಬೇಕು:

(ಎ) ನೋಂದಾಯಿತರ ಹೆಸರು;

(ಬಿ) ಅಧಿಕೃತ ವ್ಯಕ್ತಿಯ ಹೆಸರು;

(ಸಿ) ವಿಳಾಸ;

(ಡಿ) ಇ-ಮೇಲ್ ವಿಳಾಸ;

(ಇ) ಶಾಶ್ವತ ಖಾತೆ ಸಂಖ್ಯೆ (ಪ್ಯಾನ್);

(ಎಫ್) ಸರಕು ಮತ್ತು ಸೇವಾ ತೆರಿಗೆ ಗುರುತಿನ ಸಂಖ್ಯೆ (GSTIN) ಮತ್ತು ಸಂಬಂಧಪಟ್ಟ ಪ್ರವರ್ಗ;

(ಜಿ) ಕಾರ್ಪೋರೇಟ್ ಗುರುತಿನ ಸಂಖ್ಯೆ (CIN); ಮತ್ತು

(ಎಚ್) ಜಿ.ಎಸ್.ಟಿ.ಯ ಸಲ್ಲಿಕೆಗನುಸಾರವಾಗಿ ವೇದಿಕೆಯ ಮೂಲಕ ಕೈಗೊಂಡ, ಎಲ್ಲಾ ಪ್ರವರ್ಗದ ವ್ಯವಹಾರ ಅಥವಾ ಸೇವಾ ಸಂಯೋಜನಕಾರರ ಕಾರ್ಯಚಟುವಟಿಕೆಗಳು:

ಪರಂತು, ಯಾವುದೇ ತಾಂತ್ರಿಕ ಸಮಸ್ಯೆಗಳ ಕಾರಣದಿಂದಾಗಿ ತಾನೇ ಸ್ವತಃ ನೋಂದಾಯಿಸಿಕೊಳ್ಳಲು ಸಾಧ್ಯವಾಗದ ಸಂದರ್ಭದಲ್ಲಿ, ಸೂಕ್ತ ಕ್ರಮಕ್ಕಾಗಿ ಮಂಡಳಿಯನ್ನು ಸಂಪರ್ಕಿಸಬೇಕು.

(3) 11ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ನೋಂದಣಿಯ ಉದ್ದೇಶಗಳಿಗಾಗಿ, ಈ ಅಧಿನಿಯಮದ ಅರ್ಥ ವ್ಯಾಪ್ತಿಯೊಳಗೆ ಬರುವ ಯಾರೇ ಒಬ್ಬ ವ್ಯಕ್ತಿ ಅಥವಾ ನಿಗಮಿತ ನಿಕಾಯ ಅಥವಾ ಸಮೂಹವು ಬಹುವಿಭಿನ್ನ ಸೇವಾ ಸಂಯೋಜನಕಾರರನ್ನು ಅಥವಾ ವೇದಿಕೆಗಳನ್ನು ನಿರ್ವಹಿಸುತ್ತಿದ್ದರೆ, ಆಗ ಅವರು ಆ ಕಾನೂನುಬದ್ಧ ಸಂಸ್ಥೆಗೆ ಸಂಬಂಧಿಸಿದಂತೆ ಏಕ ನೋಂದಣಿಯನ್ನು ಮಾಡಿಸುವುದು ಅಗತ್ಯವಿರತಕ್ಕದ್ದು.

(4) ಈ ಉಪನಿಯಮದ ಅಡಿಯಲ್ಲಿ ನೋಂದಾಯಿತವಾದ ವ್ಯಕ್ತಿ ಅಥವಾ ನಿಗಮಿತ ನಿಕಾಯ ಅಥವಾ ಸಮೂಹವು ಆ ನಂತರದಲ್ಲಿ ರಾಜ್ಯದೊಳಗೆ ಹೊಸ ಮತ್ತು ವಿಭಿನ್ನ ಸಂಯೋಜನಕಾರ ಸಂಸ್ಥೆಯನ್ನು ಅಥವಾ ವೇದಿಕೆಯನ್ನು ನಿರ್ವಹಿಸಲು ಪ್ರಾರಂಭಿಸಿದರೆ ಅಥವಾ ಅಸ್ತಿತ್ವದಲ್ಲಿರುವ ಸೇವಾ ಸಂಯೋಜನಕಾರರ ಸಂಸ್ಥೆ ಅಥವಾ ವೇದಿಕೆಯನ್ನು ತನ್ನ ಕಾರ್ಯಾಚರಣೆಯ ಅಡಿಯಲ್ಲಿ ತೆಗೆದುಕೊಂಡರೆ, ಅಂತಹ ಸಂಸ್ಥೆಯು ಆ ಹೊಸ ಸಂಯೋಜನಕಾರ ಸಂಸ್ಥೆ ಅಥವಾ ವೇದಿಕೆಯ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದ ದಿನಾಂಕದಿಂದ ಮೂವತ್ತು (30) ಕೆಲಸದ ದಿನಗಳೊಳಗೆ ಈ ಸೇರ್ಪಡೆಯ ಬಗ್ಗೆ ಮಂಡಳಿಗೆ ತಿಳಿಸತಕ್ಕದ್ದು:

ಪರಂತು, ಕೇವಲ ಗೊತ್ತುಪಡಿಸಿದ ನೋಂದಣಿ ಪೂರ್ಟಲ್‌ನ ತಾಂತ್ರಿಕ ದೋಷಗಳಿಂದಾಗಿ ಅಥವಾ ಅಲಭ್ಯತೆಯ ಕಾರಣದಿಂದಾಗಿ ಮಾತ್ರವೇ 11ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿಗದಿಪಡಿಸಲಾದ ಕಾಲಮಿತಿಯೊಳಗೆ ನೋಂದಣಿಯನ್ನು ಪೂರ್ಣಗೊಳಿಸುವುದಕ್ಕೆ ಸೇವಾ ಸಂಯೋಜನಕಾರ ಅಥವಾ ವೇದಿಕೆಗೆ ತಾರ್ಕಿಕವಾಗಿ ತಡೆಯುಂಟಾದಲ್ಲಿ, ಮಂಡಳಿಗೆ ಆ ಬಗ್ಗೆ ಸ್ವತಃ ಮನವರಿಕೆಯಾದರೆ, ಅದು ಮೂವತ್ತು (30) ಕೆಲಸದ ದಿನಗಳನ್ನು ಮೀರದಂತೆ ಅವಧಿಯನ್ನು ವಿಸ್ತರಿಸತಕ್ಕದ್ದು.

(5) ಯಶಸ್ವಿ ನೋಂದಣಿಯ ತರುವಾಯ, ಮಂಡಳಿಯು, ಸೇವಾ ಸಂಯೋಜನಕಾರ ಸಂಸ್ಥೆ ಅಥವಾ ವೇದಿಕೆಗೆ,-

(ಎ) ಯಾವ ಷರತ್ತುಗಳ ಅಡಿಯಲ್ಲಿ ಅದು ಕಾರ್ಯನಿರ್ವಹಿಸುತ್ತಿದೆಯೋ ಆ ಷರತ್ತುಗಳನ್ನು ನಿರ್ದಿಷ್ಟಪಡಿಸಿ, ನೋಂದಣಿ ಪ್ರಮಾಣ ಪತ್ರವನ್ನು; ಮತ್ತು

(ಬಿ) ಒಂದು ವಿಶಿಷ್ಟ ನೋಂದಣಿ ಸಂಖ್ಯೆಯನ್ನು ನೀಡತಕ್ಕದ್ದು.

(6) ನೋಂದಾಯಿತ ಸೇವಾ ಸಂಯೋಜನಕಾರ ಸಂಸ್ಥೆ ಅಥವಾ ವೇದಿಕೆಯು ಒಂದಕ್ಕಿಂತ ಹೆಚ್ಚಿನ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವಲ್ಲಿ, ಅದು;

(ಎ) ವಲಯವಾರು ವಿಭಾಗಳನ್ನು ಆಧರಿಸಿ, ವಿಶಿಷ್ಟ ಪಾವತಿ ಸಂರಚನೆಗಳು ಮತ್ತು ಗಿಗ್ ಕಾರ್ಮಿಕರ ಸಂಖ್ಯೆಯೊಂದಿಗೆ ರೈಡ್-ಹೇಲಿಂಗ್, ಫುಡ್ ಡೆಲಿವರಿ, ಲಾಜಿಸ್ಟಿಕ್ಸ್, ಗೃಹ ಸೇವೆಗಳಂತಹ, ತಮ್ಮ ಪ್ರತ್ಯೇಕ ದತ್ತಾಂಶದ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ನಿಯಮ 18ರ (1)ನೇ ಉಪ-ನಿಯಮದ ಅನುಸಾರವಾಗಿ ಪ್ರತಿಯೊಂದು ವಲಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಕ್ಷೇಮಾಭಿವೃದ್ಧಿ ಶುಲ್ಕದ ವಂತಿಕೆಯನ್ನು ಠೇವಣಿ ಮಾಡತಕ್ಕದ್ದು.

(7) ಅಧಿನಿಯಮದ 11ನೇ ಪ್ರಕರಣದ ಅಡಿಯಲ್ಲಿ, ಯಾರೇ ಸೇವಾ ಸಂಯೋಜನಕಾರನು ತನ್ನ ಬಾಧ್ಯತೆಯನ್ನು ಪಾಲಿಸಲು ವಿಫಲನಾದಲ್ಲಿ, ಮಂಡಳಿಯು:

(ಎ) ಸೇವಾ ಸಂಯೋಜನಕಾರ ಅಥವಾ ವೇದಿಕೆಗೆ ನೋಂದಣಿ ಮಾಡಿಕೊಳ್ಳುವಂತೆ ನಿರ್ದೇಶಿಸಿ ನೋಟೀಸನ್ನು ನೀಡತಕ್ಕದ್ದು;

(ಬಿ) ಈ ಅಧಿನಿಯಮವು ಪ್ರಾರಂಭವಾದಾಗಿನಿಂದ ಕೆಲಸದಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಗಿಗ್ ಕಾರ್ಮಿಕರ ಕಾರ್ಯೇತಿಹಾಸವನ್ನು ಸಲ್ಲಿಸುವಂತೆ ಅಗತ್ಯಪಡಿಸತಕ್ಕದ್ದು;

(ಸಿ) ಸಂಬಂಧಪಟ್ಟ ವಹಿವಾಟುಗಳಿಗೆ ಸಂಬಂಧಿಸಿದ ಅಗತ್ಯ ಕ್ಷೇಮಾಭಿವೃದ್ಧಿ ಶುಲ್ಕದ ಕಡಿತ ಮತ್ತು ಠೇವಣಿ ಆಗಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(ಡಿ) ಅಧಿನಿಯಮದ 23ನೇ ಪ್ರಕರಣದ ಅಡಿಯಲ್ಲಿ ದಂಡದ ಬಗ್ಗೆ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡತಕ್ಕದ್ದು.

**8. ಕಾರ್ಯನಿರ್ವಹಿಸುತ್ತಿರುವ ಅಥವಾ ನೋಂದಾಯಿಸಿಕೊಂಡಿರುವ ಗಿಗ್ ಕಾರ್ಮಿಕರ ದತ್ತಾಂಶಸಂಚಯವನ್ನು ಒದಗಿಸುವುದು.-** (1) ಪ್ರತಿಯೊಬ್ಬ ಸೇವಾ ಸಂಯೋಜಕರು ಅಥವಾ ವೇದಿಕೆಯು, ಅಧಿನಿಯಮದ 10ನೇ ಪ್ರಕರಣದ (1)ನೇ ಉಪಪ್ರಕರಣಕ್ಕನುಸಾರವಾಗಿ, ಎಲ್ಲಾ ಗಿಗ್ ಕಾರ್ಮಿಕರ ದತ್ತಾಂಶ ಸಂಚಯವನ್ನು ಈ ಉದ್ದೇಶಕ್ಕಾಗಿ ಗೊತ್ತುಪಡಿಸಿದ ಸುರಕ್ಷಿತ ಡಿಜಿಟಲ್ ಪೋರ್ಟಲ್‌ನ ಮೂಲಕ ಯಂತ್ರದಿಂದ ಒದಬಹುದಾದ ನಮೂನೆಯಲ್ಲಿ ವಿದ್ಯುನ್ಮಾನದ ಮೂಲಕ ಸಲ್ಲಿಸತಕ್ಕದ್ದು. ಸೇವಾ ಸಂಯೋಜಕರು

ಅಥವಾ ವೇದಿಕೆಗಳು ಏಳು (7) ದಿನಗಳೊಳಗಾಗಿ ವರದಿ ಮಾಡುವ ಅವಧಿಯಲ್ಲಿನ ಹೊಸ ಸೇರ್ಪಡೆಗಳು ಮತ್ತು ಪ್ರತ್ಯೇಕತೆಗಳನ್ನು ತಿಳಿಸುವ ಗಿಗ್ ಕಾರ್ಮಿಕರ ಸಂಖ್ಯೆಯಲ್ಲಿ ಆದ ಯಾವುದೇ ಬದಲಾವಣೆಗಳ ಬಗ್ಗೆಯೂ ಸಹ ಮಂಡಳಿಗೆ ತಿಳಿಸುತ್ತಿರತಕ್ಕದ್ದು:

ಪರಂತು, ಅಧಿನಿಯಮದ 10ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರೂಪಿಸಲಾದ ಅವಶ್ಯಕತೆಗಳನ್ನು ಪಾಲಿಸಲು ಸೇವಾ ಸಂಯೋಜನೆಕಾರರು ಅಥವಾ ವೇದಿಕೆಗೆ ಸಾಧ್ಯವಾಗದಿದ್ದಲ್ಲಿ, ಅಂತಹ ಸೇವಾ ಸಂಯೋಜನೆಕಾರರು ಅಥವಾ ವೇದಿಕೆಯು ಎದುರಾಗಿರುವ ಸವಾಲುಗಳ ಬಗ್ಗೆ ವಿವರಿಸಿ ಮತ್ತು ಮೂವತ್ತು (30) ಕೆಲಸದ ದಿನಗಳ ವಿಸ್ತರಣೆ ಅಥವಾ ಸಮಸ್ಯೆಗೆ ಪರಿಹಾರ ಇವುಗಳಲ್ಲಿ ಯಾವುದು ತರುವಾಯವೋ ಆ ಅವಧಿ ವಿಸ್ತರಣೆಯನ್ನು ಕೋರಿ ಮಂಡಳಿಗೆ ಲಿಖಿತವಾಗಿ ಅರ್ಜಿ ಸಲ್ಲಿಸಬಹುದು;

ಮತ್ತೂ ಪರಂತು, ಇಲ್ಲಿ ಹೇಳಲಾದ ಸಲ್ಲಿಕೆ ಕಾಲಾವಧಿಯ ಪಾಲನೆಯು ಕೇವಲ ಗೊತ್ತುಪಡಿಸಿದ ಡಿಜಿಟಲ್ ಪೋರ್ಟಲ್‌ನ ತಾಂತ್ರಿಕ ವೈಫಲ್ಯ ಅಥವಾ ಅಲಭ್ಯತೆಯ ಕಾರಣದಿಂದಾಗಿ ಮಾತ್ರವೇ ತಾರ್ಕಿಕವಾಗಿ ತಡೆಯುಂಟಾದಲ್ಲಿ, ಸಲ್ಲಿಕೆಗೆ ಸಂಬಂಧಿಸಿದ ಸದರಿ ಕಾಲಾವಧಿಯನ್ನು ಮೂಲ ವಾಯಿದೆಯ ದಿನಾಂಕದಿಂದ ಏಳು ಕೆಲಸದ ದಿನಗಳವರೆಗೆ ವಿಸ್ತರಿಸತಕ್ಕದ್ದು.

(2) ಮಂಡಳಿಯು, ಅಧಿನಿಯಮದ (10)ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ವಿಧಿಸಲಾದ ಗಡುವಿನ ಅವಧಿಯ ಹಿಂದಿನ ಮೂವತ್ತು (30) ದಿನಗಳಿಗಿಂತ ಕಡಿಮೆಯಲ್ಲದ ಅವಧಿಯಲ್ಲಿ ಎಲ್ಲಾ ನೋಂದಾಯಿತ ಸೇವಾ ಸಂಯೋಜನೆಕಾರರಿಗೆ ಅಗತ್ಯ ದತ್ತಾಂಶ ಯೋಜನೆ, ಭದ್ರತಾ ಶಿಷ್ಟಾಚಾರಗಳು ಮತ್ತು ದೃಢೀಕರಣ ಕಾರ್ಯವ್ಯವಸ್ಥೆಗಳನ್ನು ಒಳಗೊಂಡಂತೆ ಗೊತ್ತುಪಡಿಸಿದ ಪೋರ್ಟಲ್‌ನ ಯುನಿಫಾರ್ಮ್ ರಿಸೋರ್ಸ್ ಲೊಕೇಟರ್ (ಯು.ಆರ್.ಎಲ್) ಅನ್ನು ತಿಳಿಸತಕ್ಕದ್ದು.

(3) ಈ ನಿಯಮದ ಅಡಿಯಲ್ಲಿ ಎಲ್ಲಾ ದತ್ತಾಂಶ ವರ್ಗಾವಣೆಗಳು ಪ್ರಸ್ತುತ, ಸೆಕ್ಯೂರ್ ಟ್ರಾನ್ಸ್‌ಪೋರ್ಟ್ ಲೇಯರ್ ಸೆಕ್ಯುರಿಟಿ (ಟಿಎಲ್‌ಎಸ್) ಗೂಢಲಿಪೀಕರಣ ಅಥವಾ ಮಂಡಳಿಯು ನಿರ್ದಿಷ್ಟಪಡಿಸಬಹುದಾದಂಥ ಇತರ ಹೆಚ್ಚುವರಿ ಗೂಢಲಿಪೀಕರಣ ಮಾನದಂಡಗಳನ್ನು ಬಳಸಿಕೊಳ್ಳತಕ್ಕದ್ದು.

(4) ಉಪ-ನಿಯಮ (1) ರ ಅಡಿಯಲ್ಲಿ ಉಪಬಂಧಿಸಲಾದ ಡಿಜಿಟಲ್ ಪೋರ್ಟಲ್, ಕಾರ್ಯ ನಿರ್ವಹಿಸುವ ಅಥವಾ ನೋಂದಣಿಯ ಸಮಯದಲ್ಲಿ ಗಿಗ್ ಕಾರ್ಮಿಕರು ಒದಗಿಸಿದ ಸೇವಾ ಸಂಯೋಜನಕಾರರ ದತ್ತಸಂಚಯದಲ್ಲಿ ಲಭ್ಯವಿರುವ, ಪ್ರತಿಯೊಬ್ಬ ಗಿಗ್ ಕಾರ್ಮಿಕನಿಗೆ ಸಂಬಂಧಿಸಿದ ಈ ಕೆಳಕಂಡ ದತ್ತಾಂಶ ವಿವರಗಳನ್ನು ಒಳಗೊಂಡಿರತಕ್ಕದ್ದು:

(ಎ) ಹೆಸರು;

(ಬಿ) ಜನ್ಮ ದಿನಾಂಕ/ ವಯಸ್ಸು;

(ಸಿ) ಲಿಂಗ;

(ಡಿ) ನೋಂದಾಯಿತವಾದ ಮೊಬೈಲ್ ಸಂಖ್ಯೆ;

(ಇ) ಆಧಾರ ಸಂಖ್ಯೆ;

(ಎಫ್) ಸೇವಾ ಸಂಯೋಜನೆಕಾರನೊಂದಿಗೆ ನೋಂದಣಿಯಾದಂತೆ ಪ್ರಾಥಮಿಕ ನಿರ್ವಹಣಾ ನಗರ ಅಥವಾ ಜಿಲ್ಲೆ;

(ಜಿ) ಇ-ಶ್ರಮ್ (ಲಭ್ಯವಿದ್ದರೆ) ಪೋರ್ಟಲ್‌ನಲ್ಲಿ ಜನರೇಟ್ ಆದಂತೆ ಯು.ಎ.ಎನ್. ಸಂಖ್ಯೆ;

(ಎಚ್) ಆಧಾರ್ ಲಿಂಕ್ ಇರುವ ಬ್ಯಾಂಕ್ ಖಾತೆಯ ಹೆಸರು;

(ಐ) ಮಂಡಳಿಯು ನಿರ್ಧರಿಸಲಾದಂತೆ ನೋಂದಣಿಯ ಯುಕ್ತ ಕ್ರಮದ ಅವಧಿಯಲ್ಲಿ ಅಗತ್ಯಪಡಿಸಲಾದ ಯಾವುದೇ ಇತರೆ ದತ್ತಾಂಶ ವಿವರ.

(5) ಮಂಡಳಿಯು ಸೂಕ್ತ ತಾಂತ್ರಿಕ ಮತ್ತು ಸಾಂಸ್ಥಿಕ ಭದ್ರತಾ ಕ್ರಮಗಳನ್ನು ಮತ್ತು ದತ್ತಾಂಶದ ಗೌಪ್ಯತೆಯನ್ನು ಪಾಲಿಸುವ ಹಾಗೂ ಕಾಪಾಡುವ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರತಕ್ಕದ್ದು ಮತ್ತು ದತ್ತಾಂಶ ರಕ್ಷಣೆಗೆ ಅನ್ವಯವಾಗುವ ಕಾನೂನುಗಳಿಗೆ ಬದ್ಧವಾಗಿರತಕ್ಕದ್ದು.

(6) ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ವ್ಯಕ್ತಿಗತ ದತ್ತಾಂಶವನ್ನು ಮಂಡಳಿಯು, ಡಿಜಿಟಲ್ ಖಾಸಗಿ ದತ್ತಾಂಶ ಸಂರಕ್ಷಣಾ ಅಧಿನಿಯಮ, 2023ರ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅನುಸಾರವಾಗಿ ಮತ್ತು ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಪ್ರಯೋಜನಗಳನ್ನು ಒದಗಿಸುವುದಕ್ಕಾಗಿ ಅಂಕಿಅಂಶಗಳನ್ನು ವಿಶ್ಲೇಷಿಸಲು ಮಾತ್ರವೇ ಬಳಸತಕ್ಕದ್ದು.

(7) ಮಂಡಳಿಯು, ಸೇವಾ ಸಂಯೋಜನೆಕಾರರು ಅಥವಾ ವೇದಿಕೆಯು ಒದಗಿಸಿದಂತಹ ಗಿಗ್ ಕಾರ್ಮಿಕರನ್ನು ಯಶಸ್ವಿಯಾಗಿ ನೋಂದಣಿ ಮಾಡಿದ ಮೇಲೆ ಅವರಿಗೆ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡತಕ್ಕದ್ದು ಮತ್ತು ಅದನ್ನು ಗಿಗ್ ಕಾರ್ಮಿಕರಿಗೆ ಮತ್ತು ಸಂಬಂಧಪಟ್ಟ ಸೇವಾ ಸಂಯೋಜನೆಕಾರರಿಗೆ ನೀಡಿದ ನೋಂದಾಯಿತ ಮೊಬೈಲ್ ಸಂಖ್ಯೆಯ ಮೂಲಕ ತಿಳಿಸತಕ್ಕದ್ದು.

(8) ಎಲ್ಲಾ ನೋಂದಾಯಿತ ಗಿಗ್ ಕಾರ್ಮಿಕರು, ಅವರ ನೋಂದಣಿ, ಪ್ರತಿಯೊಬ್ಬ ಸೇವಾ ಸಂಯೋಜಕರ ಮೂಲಕ ಮಾಡಿದ ಪಾವತಿಗಳು, ಅವರ ಗಿಗ್ ಕೆಲಸದ ಮೂಲಕ ಪ್ರಾಪ್ತವಾದ ಯೋಗಕ್ಷೇಮ ಶುಲ್ಕ, ಲಭ್ಯವಿರುವ ಯೋಜನೆಗಳು, ಅರ್ಹತಾ ಮಾನದಂಡಗಳು ಮತ್ತು ಮಂಡಳಿಯು ನಿರ್ಧರಿಸಲಾದಂಥ ಇನ್ನಿತರ ಸಂಬಂಧಪಟ್ಟ ಮಾಹಿತಿಗಳಿರುವ ನವೀಕೃತ ಮಾಹಿತಿಯುಳ್ಳ ಮಂಡಳಿಯ ಡ್ಯಾಶ್ ಬೋರ್ಡಿಗೆ ಪ್ರವೇಶಾವಕಾಶವನ್ನು ಹೊಂದಿರತಕ್ಕದ್ದು.

**9. ಮಂಡಳಿಯು ತನ್ನ ವೆಬ್ ಪೋರ್ಟಲ್‌ನಲ್ಲಿ ಸೇವಾ ಸಂಯೋಜನೆಕಾರರು ಅಥವಾ ವೇದಿಕೆಯ ಬಗ್ಗೆ ರಿಜಿಸ್ಟರ್ ಅನ್ನು ಪ್ರಕಟಿಸುವುದು.-** (1) ಮಂಡಳಿಯು, ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲಾದ ಎಲ್ಲಾ ಸೇವಾ ಸಂಯೋಜನೆಕಾರರು ಅಥವಾ ವೇದಿಕೆಗಳ ವಿವರಗಳನ್ನು ಒಳಗೊಂಡಿರುವ ಸೇವಾ ಸಂಯೋಜನೆಕಾರರು ಅಥವಾ ವೇದಿಕೆಗಳ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು ಮತ್ತು ಅಂತಹ ರಿಜಿಸ್ಟರನ್ನು ತನ್ನ ಅಧಿಕೃತ ಜಾಲತಾಣದಲ್ಲಿ ತ್ರೈಮಾಸಿಕವಾಗಿ ಪ್ರಕಟಿಸತಕ್ಕದ್ದು.

(2) ಸೇವಾ ಸಂಯೋಜನೆಕಾರರ ರಿಜಿಸ್ಟರು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಸೇವಾ ಸಂಯೋಜನೆಕಾರ ಸಂಸ್ಥೆಯ ನೋಂದಾಯಿತ ಕಾನೂನುಬದ್ಧ ಹೆಸರು;

(ಬಿ) ಅಧಿನಿಯಮಕ್ಕನುಸಾರವಾಗಿ ಮಂಡಳಿಯು ನಿಗದಿಪಡಿಸಿದ ನೋಂದಣಿ ಸಂಖ್ಯೆ;

(ಸಿ) ನೋಂದಾಯಿತ ಗಿಗ್ ಕಾರ್ಮಿಕರ ಸಂಖ್ಯೆ;

(ಡಿ) ಕಾರ್ಪೊರೇಟ್ ಗುರುತಿನ ಸಂಖ್ಯೆ (ಸಿಐಎನ್), ಸರಕುಗಳು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ನೋಂದಣಿ ಸಂಖ್ಯೆ ಮತ್ತು ಶಾಶ್ವತ ಖಾತೆ ಸಂಖ್ಯೆ (ಪ್ಯಾನ್);

(ಇ) ಸೇವಾ ಸಂಯೋಜನಕಾರರು ಸಂಪರ್ಕಕ್ಕಾಗಿ ನಿಯೋಜಿಸಿದ ಅಧಿಕೃತ ವ್ಯಕ್ತಿಯ ಇಮೇಲ್ ಮತ್ತು ಮೊಬೈಲ್ ಸಂಖ್ಯೆ.

(ಎಫ್) ನೋಂದಣಿಯ ಸಮಯದಲ್ಲಿ ಒದಗಿಸಲಾದಂತೆ ಸೇವಾ ಸಂಯೋಜನೆಕಾರರ ನೋಂದಾಯಿತ ಕಚೇರಿಯ ವಿಳಾಸ ಅಥವಾ ರಾಜ್ಯದೊಳಗಿನ ವ್ಯವಹಾರದ ಮುಖ್ಯ ಸ್ಥಳ.

ಪರಂತು, ಸೇವಾ ಸಂಯೋಜನೆಕಾರರ ಅಥವಾ ವೇದಿಕೆಯ ರಿಜಿಸ್ಟರ್ ಯಾವುದೇ ವಾಣಿಜ್ಯ, ಕಾರ್ಯಾಚರಣೆ ಅಥವಾ ಹಣಕಾಸು ದತ್ತಾಂಶ ಅಥವಾ ಇತರ ಹಣಕಾಸು ವ್ಯವಹಾರದ ಅಂಶಗಳನ್ನು ಒಳಗೊಳ್ಳತಕ್ಕದ್ದಲ್ಲ.

**10. ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ನಿರ್ಧಾರ ಕೈಗೊಳ್ಳುವ ವ್ಯವಸ್ಥೆಗಳ ಕುರಿತು ಮಾಹಿತಿಯನ್ನು ಕೋರುವುದು.-** (1) ಪ್ರತಿಯೊಬ್ಬ ಸೇವಾ ಸಂಯೋಜನಕಾರ ಅಥವಾ ವೇದಿಕೆಯು, ಗಿಗ್ ಕಾರ್ಮಿಕರ ಮೇಲೆ ಪರಿಣಾಮ ಬೀರಬಹುದಾದ ದರಗಳು, ಗಳಿಕೆಗಳು ಮತ್ತು ಗ್ರಾಹಕರ ಪ್ರತಿಕ್ರಿಯೆಯ ಬಗ್ಗೆ ಮಾಹಿತಿಯನ್ನು ಪಡೆಯುವುದಕ್ಕೆ ಸಂಬಂಧಿಸಿದಂತೆ ಸೇವಾ ಸಂಯೋಜನೆಕಾರ ಅಥವಾ ವೇದಿಕೆಯನ್ನು ಸಂಪರ್ಕಿಸುವುದಕ್ಕೆ ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗೆ ಅನುವು ಮಾಡಿಕೊಡಲು ತನ್ನ ವೇದಿಕೆಯಲ್ಲಿ ಗೊತ್ತುಪಡಿಸಿದ ಕಾರ್ಯವ್ಯವಸ್ಥೆಯನ್ನು ಪ್ರಕಟಿಸತಕ್ಕದ್ದು.

(2) ಗಿಗ್ ಕಾರ್ಮಿಕರು ಕೇಳಿದ ಪ್ರಶ್ನೆಗಳಿಗೆ ಅದನ್ನು ಸ್ವೀಕರಿಸಿದ ಐದು ಕೆಲಸದ ದಿನಗಳಲ್ಲಿ ಸೇವಾ ಸಂಯೋಜನೆಕಾರರು ಅಥವಾ ವೇದಿಕೆಯು ಉತ್ತರಿಸತಕ್ಕದ್ದು.

**11. ಗಿಗ್ ಕಾರ್ಮಿಕರ ಕುಂದುಕೊರತೆಗಳನ್ನು ನಿವಾರಿಸುವ ಹಕ್ಕು.-**(1) ಪ್ರಕರಣ 22ರ ಉಪಪ್ರಕರಣ (2)ರ ಅಡಿಯಲ್ಲಿ ಸೇವಾ ಸಂಯೋಜನಕಾರ ಅಥವಾ ವೇದಿಕೆಯ ನಿರ್ಧಾರದಿಂದ ಬಾಧಿತನಾದ ಯಾರೇ ಗಿಗ್ ಕಾರ್ಮಿಕನು, 22ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಉಲ್ಲೇಖಿಸಲಾದ ಯಾವುದೇ ಉಲ್ಲಂಘನೆಯ ಬಗ್ಗೆ ಮಾಹಿತಿ ಸ್ವೀಕರಿಸಿದ ದಿನಾಂಕದಿಂದ ಏಳು (7) ಕೆಲಸದ ದಿನಗಳ ಒಳಗಾಗಿ, ಪೂರಕ ದಾಖಲೆಗಳು ಮತ್ತು ಮಾಹಿತಿಯೊಂದಿಗೆ ಸೇವಾ ಸಂಯೋಜನೆಕಾರ ಅಥವಾ ವೇದಿಕೆಯ ಆಂತರಿಕ ವಿವಾದ ಪರಿಹಾರ ಸಮಿತಿಯ ಮುಂದೆ ತನ್ನ ದೂರನ್ನು ಸಲ್ಲಿಸಬಹುದು.

ಈ ನಿಯಮಗಳ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, (ಎ) ಭಾರತೀಯ ನ್ಯಾಯ ಸಂಹಿತೆ, 2023ರ ಅಧ್ಯಾಯ–V ಮತ್ತು VI ರ ಅಡಿಯಲ್ಲಿನ ಉಪಬಂಧಗಳು (ಬಿ) ಭೌತಿಕ ಮತ್ತು ಹಣಕಾಸಿನ ವಂಚನೆ; ಮತ್ತು (ಸಿ) ಮಂಡಳಿಯು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಯಾವುದೇ ಇತರ ಅಪರಾಧಗಳ ಪ್ರಕರಣದಲ್ಲಿ ಖರೀದಿದಾರರ ಮತ್ತು ಸಮಸ್ತ ಸಾರ್ವಜನಿಕರ ಹಿತದೃಷ್ಟಿಯಿಂದ ಸೇವಾ ಸಂಯೋಜನಕಾರನು ಗಿಗ್ ಕಾರ್ಮಿಕನನ್ನು ತಕ್ಷಣವೇ ವಜಾಗೊಳಿಸಬಹುದು.

(2) ಸೇವಾ ಸಂಯೋಜನಕಾರ ಅಥವಾ ವೇದಿಕೆಯು, ಅಧಿನಿಯಮದ 22ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಆಂತರಿಕ ವಿವಾದ ಪರಿಹಾರ ಸಮಿತಿಯ ಮುಖಾಂತರ, ಅಂತಹ ದೂರುಗಳ ಬಗ್ಗೆ ವ್ಯವಹರಿಸತಕ್ಕದ್ದು ಮತ್ತು ಹದಿನೈದು (15) ಕೆಲಸದ ದಿನಗಳೊಳಗೆ ಅದನ್ನು ಪರಿಹರಿಸಲು ಪ್ರಯತ್ನಿಸತಕ್ಕದ್ದು.

(3) ನಿಯಮ 11ರ (2)ನೇ ಉಪ ಪ್ರಕರಣದ ಅಡಿಯಲ್ಲಿ ಕೈಗೊಳ್ಳಬಹುದಾದ ಅಂತಿಮ ನಿರ್ಣಯದ ಮೂಲಕ ಬಾಧಿತನಾದ ಯಾರೇ ಪಕ್ಷಕಾರರು, ಎಲ್ಲಾ ಪೂರಕ ದಾಖಲೆಗಳೊಂದಿಗೆ ಮಂಡಳಿಯಿಂದ ನೇಮಿಸಲ್ಪಟ್ಟ ಅಧಿಕೃತ ವ್ಯಕ್ತಿಗೆ ಮೂವತ್ತು (30) ದಿನಗಳೊಳಗಾಗಿ ಮೇಲ್ಮನವಿ ಸಲ್ಲಿಸತಕ್ಕದ್ದು.

(4) ಮಂಡಳಿಯ ಅಧಿಕೃತ ವ್ಯಕ್ತಿಯು, ಸಹಜ ನ್ಯಾಯ ತತ್ವಕ್ಕನುಸಾರವಾಗಿ ಮೇಲ್ಮನವಿ ವ್ಯವಹರಣೆಗಳನ್ನು ನಡೆಸತಕ್ಕದ್ದು ಮತ್ತು ಮೇಲ್ಮನವಿಯನ್ನು ಮೂವತ್ತು (30) ಕೆಲಸದ ದಿನಗಳೊಳಗೆ ವಿಲೆ ಮಾಡತಕ್ಕದ್ದು.

**12. ವಲಯ-ನಿರ್ದಿಷ್ಟ ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯ ಮಾನದಂಡಗಳು.-** (1) ಮಂಡಳಿಯು, ತನ್ನ ಅನುಮೋದಿತ ವಿನಿಯಮದ ಮೂಲಕ, ವಲಯ-ನಿರ್ದಿಷ್ಟ ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯ ಮಾನದಂಡಗಳು ಹಾಗೂ ಮಾದರಿ ಕಾರ್ಯವಿಧಾನ (ಎಸ್‌ಒಪಿ)ಗಳನ್ನು, ಮಂಡಳಿಯ ಸದಸ್ಯರೊಂದಿಗೆ ಹಾಗೂ ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯ ಮಾನದಂಡಗಳ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಂದು ವಲಯದಿಂದ ಒಬ್ಬ ಸೇವಾ ಸಂಯೋಜನಕಾರ ಸೇರಿದಂತೆ ಇತರೆ ಆಹ್ವಾನಿತ ತಜ್ಞರೊಂದಿಗೆ ಸಮಾಲೋಚಿಸಿ ನಿರ್ದಿಷ್ಟಪಡಿಸತಕ್ಕದ್ದು.

(2) ಉಪ ನಿಯಮ (1)ರ ಅಡಿಯಲ್ಲಿ ಸೇವಾ ಸಂಯೋಜನಕಾರರು ಮಾಡುವ ಅನುಪಾಲನೆಗಳ ಗರಿಷ್ಠ ಅವಧಿಯು, ವಲಯ-ನಿರ್ದಿಷ್ಟ ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯ ಮಾನದಂಡಗಳನ್ನು ತಿಳಿಸಿದ ದಿನಾಂಕದಿಂದ ಅಥವಾ ಅದನ್ನು ಮಂಡಳಿಯ ಅಧಿಕೃತ ಪೋರ್ಟಲ್‌ನಲ್ಲಿ ಪ್ರಕಟಿಸಿದ ನಂತರ ಮೂರು ತಿಂಗಳ ಗರಿಷ್ಠ ಅವಧಿಯಾಗಿರತಕ್ಕದ್ದು.

(3) ಪ್ರತಿಯೊಬ್ಬ ಸೇವಾ ಸಂಯೋಜನಕಾರ ಅಥವಾ ವೇದಿಕೆಯು, ಸಾಧ್ಯವಾದಷ್ಟು ಮಟ್ಟಿಗೆ, ಸುರಕ್ಷಿತವಾದ, ಕೆಲಸಗಾರನ ಆರೋಗ್ಯಕ್ಕೆ ಅಪಾಯವಿಲ್ಲದ ಮತ್ತು ಕೆಲಸದ ಸ್ವರೂಪಕ್ಕೆ ಸೂಕ್ತವಾದ ಕೆಲಸದ ವಾತಾವರಣವನ್ನು ಒದಗಿಸಬೇಕು ಮತ್ತು ನಿರ್ವಹಿಸಬೇಕು.

(4) ಸೇವಾ ಸಂಯೋಜನಕಾರರು ಮತ್ತು ವೇದಿಕೆಗಳು, ತಮ್ಮ ಅಪ್ಲಿಕೇಶನ್‌ಗಳಲ್ಲಿ ತಮ್ಮ ಎಲ್ಲಾ ಗಿಗ್ ಕಾರ್ಮಿಕರಿಗೆ ಅನ್ವಯವಾಗುವ ಸಂದರ್ಭಗಳಲ್ಲಿ ಸುರಕ್ಷತಾ ಮಾರ್ಗದರ್ಶನಕ್ಕೆ ಮತ್ತು ತುರ್ತು ಸುರಕ್ಷತಾ ಬಟನ್ ಆಯ್ಕೆಗಳಿಗೆ ಪ್ರವೇಶಾವಕಾಶವನ್ನು ಸಹ ಕಲ್ಪಿಸತಕ್ಕದ್ದು.

(5) ಸೇವಾ ಸಂಯೋಜನಕಾರರು ಮತ್ತು ವೇದಿಕೆಗಳು, ಔದ್ಯೋಗಿಕ ಅಪಾಯಗಳು ಮತ್ತು ಸುರಕ್ಷಿತ ಕಾರ್ಯ ಪದ್ಧತಿಗಳ ಕುರಿತು ಮಾಹಿತಿ ಮತ್ತು ತರಬೇತಿಗೆ ಪ್ರವೇಶಾವಕಾಶವನ್ನು ಸಹ ನೀಡತಕ್ಕದ್ದು ಮತ್ತು ಪ್ರಥಮ ಚಿಕಿತ್ಸಾ ಮಾರ್ಗದರ್ಶನ ಮತ್ತು ತುರ್ತು ಸಹಾಯವಾಣಿ ಸಂಖ್ಯೆಗೆ ಪ್ರವೇಶ ಕಲ್ಪಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(6) ಮಹಿಳೆಯರು ಎದುರಿಸುವ ಎಲ್ಲಾ ಲೈಂಗಿಕ ಕಿರುಕುಳ ಮತ್ತು ಅದಕ್ಕೆ ಸಂಬಂಧಪಟ್ಟ ದೂರುಗಳ ಬಗ್ಗೆ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಅಧಿನಿಯಮ, 2013 ಕ್ಕನುಸಾರವಾಗಿ ವ್ಯವಹರಿಸತಕ್ಕದ್ದು.

**13. ಬಹಿರಂಗಪಡಿಸುವಿಕೆಯ ಹೊಣೆಗಾರಿಕೆಗಳ ಪ್ರಕಟಣೆ.-** (1) ಪ್ರತಿಯೊಬ್ಬ ಸೇವಾ ಸಂಯೋಜನಕಾರ ಅಥವಾ ವೇದಿಕೆಯು ತನ್ನ ಡಿಜಿಟಲ್ ವೇದಿಕೆಯಲ್ಲಿ ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗೆ ಕುಂದುಕೊರತೆ ನಿವಾರಣಾ ಕಾರ್ಯವ್ಯವಸ್ಥೆಯ ಮೇಲಿನ ಮಾಹಿತಿಯು ದೊರಯುವಂತೆ ಮಾಡತಕ್ಕದ್ದು.

(2)ಉಪನಿಯಮ (1)ರ ಅಡಿಯಲ್ಲಿನ ಬಹಿರಂಗಪಡಿಸುವಿಕೆಯ ಹೊಣೆಗಾರಿಕೆಗಳಲ್ಲಿ ಕುಂದುಕೊರತೆಗಳನ್ನು ಶೀಘ್ರವಾಗಿ ನಿರ್ವಹಿಸುವುದು, ವಿಮೆ ಮತ್ತು ಕ್ಷೇಮಾಭಿವೃದ್ಧಿ

ಯೋಜನೆಗಳು ಯಾವುವಾದರೂ ಇದ್ದರೆ, ಅವುಗಳು, ಅಧಿನಿಯಮದ ಅಡಿಯಲ್ಲಿನ ನಿಧಿಗೆ ಕಲ್ಯಾಣ ಶುಲ್ಕ ಕಟಾವಣೆ, ತೆಗೆದುಹಾಕುವಿಕೆ ಮತ್ತು ನಿಷ್ಕ್ರಿಯಗೊಳಿಸುವ ಕಾರ್ಯವಿಧಾನಗಳು, ಅಪಘಾತ ಪರಿಹಾರ ಮತ್ತು ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಸಂಪರ್ಕ ಕಲ್ಪಿಸುವುದು, ದೈಹಿಕ ಕಿರುಕುಳಕ್ಕೆ ಸಂಬಂಧಿಸಿದ ದೂರುಗಳನ್ನು ನಿರ್ವಹಿಸುವುದನ್ನು ಒಳಗೊಂಡಿರತಕ್ಕದ್ದು.

(3) ಎಲ್ಲಾ ಪ್ರಕಟಣೆಗಳು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಹಾಗೂ ಗಿಗ್ ಕಾರ್ಮಿಕರು ಆದ್ಯತೆ ನೀಡುವ ಸಂವಿಧಾನದ 8ನೇ ಅನುಸೂಚಿ ಪಟ್ಟಿಯಲ್ಲಿರುವ ಯಾವುದೇ ಇತರ ಭಾಷೆಯಲ್ಲಿರಬೇಕು.

(4) ಮೇಲೆ ತಿಳಿಸಿದ ರೀತಿಯಲ್ಲಿ ಪ್ರಕಟಿಸಬೇಕಾದ ಮೇಲಿನ ಬಹಿರಂಗಪಡಿಸುವಿಕೆಯ ಹೊಣೆಗಾರಿಕೆಗಳನ್ನು ತಾಂತ್ರಿಕ ಅಥವಾ ಕಾನೂನು ಪರಿಭಾಷೆಯಲ್ಲಿ ಬರೆಯದೆ ಸಾಮಾನ್ಯ ಮತ್ತು ಸರಳ ಭಾಷೆಯಲ್ಲಿ ಬರೆಯತಕ್ಕದ್ದು.

**14. ಯಾವುದೇ ಇತರ ಮೂಲಗಳಿಂದ ಸ್ವೀಕರಿಸಿದ ಮೊತ್ತಗಳು.-** ಈ ಕೆಳಗಿನವುಗಳನ್ನು ಸಹ ಅಧಿನಿಯಮದ ಪ್ರಕರಣ 19ರ ಉಪ ಪ್ರಕರಣ(1) ಖಂಡ(v)ರ ಅಡಿಯಲ್ಲಿ ಮಂಡಳಿಯಿಂದ ಸ್ವೀಕರಿಸಬಹುದಾದ ನಿಧಿ ಎಂದು ಪರಿಗಣಿಸತಕ್ಕದ್ದು.- (1) ಸೇವಾ ಸಂಯೋಜಕರು ಕರ್ನಾಟಕ ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ನಿಧಿಗೆ ನೀಡುವ ಕಡ್ಡಾಯ ಕ್ಷೇಮಾಭಿವೃದ್ಧಿ ಶುಲ್ಕವನ್ನು ಮೀರಿ ಅಧಿಕವಾಗಿ ನೀಡುವ ಯಾವುದೇ ಸ್ವಯಂಪ್ರೇರಿತ ವಂತಿಗೆಯನ್ನು ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್)ಯ ಉಪಕ್ರಮವೆಂದು ಪರಿಗಣಿಸತಕ್ಕದ್ದು.

(2) ಸೇವಾ ಸಂಯೋಜನಕಾರರು ಕಡ್ಡಾಯ ಕ್ಷೇಮಾಭಿವೃದ್ಧಿ ಶುಲ್ಕವನ್ನು ಮೀರಿ ಅಧಿಕವಾಗಿ ನೀಡುವ ಯಾವುದೇ ಸ್ವಯಂಪ್ರೇರಿತ ವಂತಿಗೆಗಳು ಆದಾಯ ತೆರಿಗೆ ಅಧಿನಿಯಮ, 1961ರ ಉಪಬಂಧಗಳ ಅಡಿಯಲ್ಲಿ ಆದಾಯ ತೆರಿಗೆ ಕಡಿತಗಳಿಗೆ ಅರ್ಹತೆ ಪಡೆಯುತ್ತವೆ.

**15. ನಿಧಿಯ ಬಳಕೆ ಮತ್ತು ನಿರ್ವಹಣೆ.** (1) ಸಾಮಾಜಿಕ ಭದ್ರತಾ ಯೋಜನೆಗಳು ಮತ್ತು ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ಅದರ ಆಡಳಿತಾತ್ಮಕ ವೆಚ್ಚಗಳ ಕಡೆಗೆ ನಿಧಿಯನ್ನು ಬಳಸುವುದಕ್ಕೆ ಸಂಬಂಧಿಸಿದ ನಿರ್ದಿಷ್ಟ ವಿಧಾನ, ಆದ್ಯತೆಗಳು ಮತ್ತು ಹಂಚಿಕೆಗಳನ್ನು ನಿರ್ಧರಿಸಲು ಮಂಡಳಿಯು ವಿಶೇಷ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಮಂಡಳಿಯು, ಪ್ರತಿಯೊಂದು ಹಣಕಾಸು ವರ್ಷದಲ್ಲಿ ಸರ್ಕಾರದಿಂದ ಅನುಮೋದನೆ ಪಡೆದ ನಂತರ, ತನ್ನ ನಿರ್ಣಯದ ಮೂಲಕ ಮತ್ತು ವಾರ್ಷಿಕ ಆಯವ್ಯಯದ ಮುಖಾಂತರ, ನಿಧಿಯಿಂದ ಭರಿಸಲಾದ ಎಲ್ಲಾ ವೆಚ್ಚಗಳಿಗೆ ಸಂಬಂಧಿಸಿದ ನಿರ್ದೇಶನಗಳಿಗೆ ಬದ್ಧವಾಗಿ ಕಾರ್ಯನಿರ್ವಹಿಸತಕ್ಕದ್ದು.

(3) ಮಂಡಳಿಯು, ಯುಕ್ತ ಆರ್ಥಿಕ ವಿವೇಚನೆಯೊಂದಿಗೆ ನಿರ್ವಹಿಸಲಾದ ನಿಧಿಗೆ ಸಂಬಂಧಿಸಿದಂಥ ಲೆಕ್ಕಪತ್ರಗಳು ಮತ್ತು ದಾಖಲೆಗಳ ಸೂಕ್ತ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು,

(4) ಮಂಡಳಿಯು, ಪ್ರತಿಯೊಂದು ಹಣಕಾಸು ವರ್ಷಕ್ಕೆ ಸಂಬಂಧಿಸಿದ ಲೆಕ್ಕಪರಿಶೋಧಿತ ಹಣಕಾಸು ವಿವರ ಪಟ್ಟಿಗಳೊಂದಿಗೆ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು, ಇದನ್ನು ರಾಜ್ಯ ವಿಧಾನಮಂಡಲದಲ್ಲಿ ವಾರ್ಷಿಕ ವರದಿಯೊಂದಿಗೆ ಮಂಡಿಸತಕ್ಕದ್ದು.

5) ಖರ್ಚು-ವೆಚ್ಚವನ್ನು ಮಂಡಳಿಯ ಅನುಮೋದನೆಗೆ ಒಳಪಟ್ಟು ಭರಿಸತಕ್ಕದ್ದು.

(6) ಮಂಡಳಿಯು ನಿಧಿಯ ಅಭಿರಕ್ಷಕನಾಗಿದ್ದು, ಈ ಅಧಿನಿಯಮದ ಪ್ರಕರಣ 2(ಕೆ) ಅಡಿಯಲ್ಲಿ ಪರಿಭಾಷಿಸಲಾದಂತೆ ಮತ್ತು ಅಧಿನಿಯಮದ ಪ್ರಕರಣ 7ರ ಅಡಿಯಲ್ಲಿ

ನಿಗದಿಪಡಿಸಿದಂತೆ ನೋಂದಾಯಿತ ಮತ್ತು ಅರ್ಹ ಫಲಾನುಭವಿಗಳು ಮತ್ತು ಅವರ ಅವಲಂಬಿತರಿಗಾಗಿ ಮತ್ತು ಅವರ ಪರವಾಗಿ ಈ ನಿಧಿಯನ್ನು ನಿರ್ವಹಿಸತಕ್ಕದ್ದು.

(7) ಮಂಡಳಿಯು ನೋಂದಾಯಿತ ಕಾರ್ಮಿಕರಿಗೆ ಈ ಕೆಳಗಿನವುಗಳಿಗೆ ಸಂಬಂಧಿಸಿದ ಪ್ರಯೋಜನಗಳನ್ನು ರೂಪಿಸಿ ಅಧಿಸೂಚಿಸಬಹುದು:

(i) ಜೀವ ವಿಮೆ;

(ii) ಅಪಘಾತ ಪ್ರಯೋಜನ;

(ii) ಅಂಗವೈಕಲ್ಯ ಪ್ರಯೋಜನ;

(iii) ವೈದ್ಯಕೀಯ ಪ್ರಯೋಜನ

(iv) ಪ್ರಸೂತಿ ಸೌಲಭ್ಯಗಳು;

(v) ವಯೋವೃದ್ಧರ ರಕ್ಷಣೆ;

(vi) ಮಂಡಳಿಯು ಕಾಲಕಾಲಕ್ಕೆ ನಿರ್ಧರಿಸುವಂಥ ಇತರ ಸಾಮಾಜಿಕ ಭದ್ರತಾ ಪ್ರಯೋಜನಗಳು.

**16. ಬಂಡವಾಳ ಹೂಡಿಕೆ.-** ಮಂಡಳಿಯಲ್ಲಿ ಸಂಗ್ರಹವಾಗುವ ಎಲ್ಲಾ ಹಣವನ್ನು, ಮುಚ್ಚಿದ ಕೊಟೇಶನ್ ಆಹ್ವಾನಿಸಿದ ನಂತರ ಮಂಡಳಿಯ ಸದಸ್ಯ ಕಾರ್ಯದರ್ಶಿಯು ನಿರ್ಧರಿಸಿದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹೂಡಿಕೆ ಮಾಡತಕ್ಕದ್ದು.

**17. ಕ್ಷೇಮಾಭಿವೃದ್ಧಿ ಶುಲ್ಕವನ್ನು ಸಂಗ್ರಹಿಸುವುದು.-** (1) ರಾಜ್ಯ ಸರ್ಕಾರವು, ಅಧಿನಿಯಮದ ಪ್ರಕರಣ 20ರ ಉಪ-ಪ್ರಕರಣ (3)ರ ಅಡಿಯಲ್ಲಿ ನಿಗದಿಪಡಿಸಿದಂತೆ ಕ್ಷೇಮಾಭಿವೃದ್ಧಿ ಶುಲ್ಕವನ್ನು ಈ ಕೆಳಗಿನ ವಿಧಾನದಲ್ಲಿ ಸಂಗ್ರಹಿಸತಕ್ಕದ್ದು:

(2) ಸೇವಾ ಸಂಯೋಜನಕಾರನು ಪ್ರತಿ ತ್ರೈಮಾಸಿಕದ ಅಂತ್ಯದಿಂದ ಐದು ಕೆಲಸದ ದಿನಗಳೊಳಗೆ, ಕ್ಷೇಮಾಭಿವೃದ್ಧಿ ಶುಲ್ಕವನ್ನು ಸ್ವಯಂಚಾಲಿತವಾಗಿ ಲೆಕ್ಕ ಹಾಕತಕ್ಕದ್ದು ಮತ್ತು ಅಂತಹ ಕ್ಷೇಮಾಭಿವೃದ್ಧಿ ಶುಲ್ಕವನ್ನು ತ್ರೈಮಾಸಿಕದ ಆಧಾರದ ಮೇಲೆ ಸರಳ ಪ್ರಮಾಣೀಕೃತ ನಮೂನೆಯಲ್ಲಿ ಸ್ವಯಂ ಘೋಷಿಸತಕ್ಕದ್ದು ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸುವ ದರಗಳಲ್ಲಿ (ಇತ್ಯರ್ಥವಾದ ಪಾವತಿಗಳನ್ನು ಹೊರತುಪಡಿಸಿ) ಕ್ಷೇಮಾಭಿವೃದ್ಧಿ ಶುಲ್ಕವನ್ನು ಪಾವತಿಸತಕ್ಕದ್ದು.

**ವಿವರಣೆ**.- ಇತ್ಯರ್ಥವಾದ ಪಾವತಿಗಳು ಎಂದರೆ, ರೆಫರಲ್ ಶುಲ್ಕಗಳು, ಪ್ರೋತ್ಸಾಹಕಗಳು ಮತ್ತು ಅಂತಹುದೇ ರೀತಿಯ ಇತರ ಪಾವತಿಗಳನ್ನು ಒಳಗೊಂಡಂತೆ ಯಾವುದೇ ಬಕ್ಷೀಸು, ಎಕ್ಸ್ ಗ್ರೇಷಿಯಾ/ಈವೆಂಟ್-ಆಧಾರಿತ/ವಿಶೇಷ ಪಾವತಿ(ಗಳು) ಎಂದರ್ಥ.

**18. ಸೇವಾ ಸಂಯೋಜನಕಾರರು ಅಥವಾ ವೇದಿಕೆಯು ಕ್ಷೇಮಾಭಿವೃದ್ಧಿ ಶುಲ್ಕವನ್ನು ಠೇವಣಿ ಮಾಡುವುದು.-** (1) ಸೇವಾ ಸಂಯೋಜನಕಾರನು, ಆರ್‌ಬಿಐ ಅನುಮತಿಸಿದ ಯಾವುದೇ ಬ್ಯಾಂಕಿಂಗ್ ವಿಧಾನಗಳ ಮೂಲಕ ಮತ್ತು ತ್ರೈಮಾಸಿಕ ಆಧಾರದ ಮೇಲೆ, ಮಂಡಳಿಯ ಬ್ಯಾಂಕ್ ಖಾತೆ/ಖಜಾನೆಗೆ, ವಿದ್ಯುನ್ಮಾನ ರೂಪದಲ್ಲಿ ಕ್ಷೇಮಾಭಿವೃದ್ಧಿ ಶುಲ್ಕವನ್ನು ಜಮೆ ಮಾಡತಕ್ಕದ್ದು ಮತ್ತು ಅದರ ವಿವರಗಳು ಪೋರ್ಟಲ್‌ನಲ್ಲಿ ಲಭ್ಯವಿರತಕ್ಕದ್ದು.

(2) ಮಂಡಳಿಯು, ಅನುಮೋದಿತ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಗರಿಷ್ಠ ಎರಡು ಕ್ಷೇಮಾಭಿವೃದ್ಧಿ ಶುಲ್ಕ ಜಮೆ ಖಾತೆಗಳನ್ನು ಹೊಂದಿರತಕ್ಕದ್ದು.

(3) ಯಾವುದೇ ಸೇವಾ ಸಂಯೋಜನಕಾರನು ಅಥವಾ ವೇದಿಕೆಯು ಕ್ಷೇಮಾಭಿವೃದ್ಧಿ ಶುಲ್ಕದ ವಂತಿಗೆಯನ್ನು ಮೀರಿ ಯಾವುದೇ ಹೆಚ್ಚುವರಿ ಮೊತ್ತವನ್ನು ಪಾವತಿ ಮಾಡಿದ್ದ

ಸಂದರ್ಭದಲ್ಲಿ, ಅಂತಹ ಸೇವಾ ಸಂಯೋಜನಕಾರ ಅಥವಾ ವೇದಿಕೆಯು ಮಂಡಳಿಯಿಂದ ತೊಂಬತ್ತು (90) ದಿನಗಳೊಳಗೆ ಅಂತಹ ಹೆಚ್ಚುವರಿ ಮೊತ್ತದ ಮರುಪಾವತಿಗಾಗಿ ಕ್ಲೇಮು ಮಾಡತಕ್ಕದ್ದು.

(4) ಮಂಡಳಿಯು ನೇಮಿಸಿದ ನಿಯೋಜಿತ ಅಧಿಕಾರಿಯು ತಾನು ಸೂಕ್ತವೆಂದು ಭಾವಿಸುವಂಥ ಕ್ಲೇಮುಗಳನ್ನು ವಿಚಾರಣೆ ಮಾಡತಕ್ಕದ್ದು ಮತ್ತು ಅಂತಹ ಕ್ಲೇಮನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು (30) ದಿನಗಳನ್ನು ಮೀರದ ಅವಧಿಯೊಳಗೆ ಅಂತಹ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲು ಅಥವಾ ಮರುಪಾವತಿಸದಿರಲು ಯುಕ್ತ ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಆ ಆದೇಶವು ಸೂಕ್ತ ಮತ್ತು ಸಕಾರಣವಾಗಿರತಕ್ಕದ್ದು.

(5) ಕ್ಷೇಮಾಭಿವೃದ್ಧಿ ಶುಲ್ಕಗಳ ಸರಿಹೊಂದಾಣಿಕೆಯ ಸಮಯದಲ್ಲಿ ಮಂಡಳಿಯ ಹಣಕಾಸು ವಿಭಾಗವು ಗಮನಿಸಿದಂತೆ ಯಾರೇ ಸೇವಾ ಸಂಯೋಜನಕಾರ ಅಥವಾ ವೇದಿಕೆಯು ಕ್ಷೇಮಾಭಿವೃದ್ಧಿ ಶುಲ್ಕದ ವಂತಿಗೆಯನ್ನು ಕಡಿಮೆ ಅಥವಾ ಅತಿ ಕಡಿಮೆ ಪಾವತಿಸಿರುವ ಸಂದರ್ಭದಲ್ಲಿ, ಮಂಡಳಿಯು, ನೋಟೀಸಿನಲ್ಲಿ ಉಲ್ಲೇಖಿಸಿದ ನಿರ್ದಿಷ್ಟ ಸಮಯದೊಳಗೆ ಗುರುತಿಸಿದ ಕೊರತೆಯ ಮೊತ್ತವನ್ನು ಪಾವತಿಸಲು ಅಂಥ ಸೇವಾ ಸಂಯೋಜನಕಾರ ಅಥವಾ ವೇದಿಕೆಯನ್ನು ಕಾರಣ ಕೇಳಿ ನೋಟೀಸ್‌ನ್ನು ನೀಡತಕ್ಕದ್ದು.

(6) ನಿಯಮ 18ರ ಉಪ-ನಿಯಮ 3ರ ಮೇರೆಗಿನ ನೋಟಿಸ್‌ನಲ್ಲಿ ಉಲ್ಲೇಖಿಸಿದಂತೆ ನಿಗದಿತ ಸಮಯದೊಳಗೆ ಅಂತಹ ಕೊರತೆಯ ಮೊತ್ತವನ್ನು ಪಾವತಿಸುವುದಕ್ಕೆ ಬದ್ಧವಾಗಿರಲು ಮತ್ತು ಪಾವತಿಸಲು ವಿಫಲವಾದರೆ ಅಂಥ ವಿಫಲತೆಯು ಅಧಿನಿಯಮದ ಪ್ರಕರಣ 23ರ ಅಡಿಯಲ್ಲಿ ದಂಡ ವಿಧಿಸುವುದಕ್ಕೆ ಕಾರಣವಾಗುತ್ತದೆ.

**19. ಕ್ಷೇಮಾಭಿವೃದ್ಧಿ ಶುಲ್ಕದ ಸರಿಹೊಂದಾಣಿಕೆ.-** (1) ಕರ್ನಾಟಕ ರಾಜ್ಯದೊಳಗೆ ಪಾವತಿಸಬೇಕಾದ ನಿರ್ದಿಷ್ಟ ಕ್ಷೇಮಾಭಿವೃದ್ಧಿ ಶುಲ್ಕಕ್ಕೆ ಸಂಬಂಧಿಸಿದಂತೆ ಅನ್ವಯವಾಗಬಹುದಾದ ಯಾವುದೇ ಇತರ ಕಾನೂನಿನ ಅಡಿಯಲ್ಲಿ ವಂತಿಗೆಯನ್ನು ಪಾವತಿಸಲು ಸೇವಾ ಸಂಯೋಜಕರು ಹೊಣೆಗಾರರಾಗಿದ್ದರೆ, ಮಂಡಳಿಯು, ಕ್ಷೇಮಾಭಿವೃದ್ಧಿ ಶುಲ್ಕದ ಯಾವುದೇ ಸರಿಹೊಂದಾಣಿಕೆಯನ್ನು ಪರಿಗಣಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಕರ್ನಾಟಕ ರಾಜ್ಯದೊಳಗೆ ಪಾವತಿಸಬೇಕಾದ ಅಥವಾ ಭಾರತ ಸರ್ಕಾರಕ್ಕೆ ಪಾವತಿಸಬೇಕಾದ ಯಾವುದೇ ಕ್ಷೇಮಾಭಿವೃದ್ಧಿ ಶುಲ್ಕವನ್ನು ಸೇವಾ ಸಂಯೋಜಕರು ಪಾವತಿಸಲು ಹೊಣೆಗಾರರಾಗಿದ್ದರೆ, ಅಂತಹ ಮೊತ್ತವನ್ನು ತ್ರೈಮಾಸಿಕ ಆಧಾರದಲ್ಲಿ ಈ ಅಧಿನಿಯಮ ಮತ್ತು ಅದರ ಮೇರೆಗೆ ರೂಪಿಸಲಾದ ನಿಯಮಗಳ ಅಡಿಯಲ್ಲಿ ಸೇವಾ ಸಂಯೋಜಕರು ಪಾವತಿಸಬೇಕಾದ ಮೊತ್ತದಿಂದ ಸರಿದೂಗಿಸತಕ್ಕದ್ದು.

(3) ಸೇವಾ ಸಂಯೋಜಕರು, ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆ (ಪಿಡಬ್ಲ್ಯೂಎಫ್‌ವಿಎಸ್) ಯಲ್ಲಿ ಅಂತಹ ಸರಿಹೊಂದಾಣಿಕೆಯ ಲೆಕ್ಕಾಚಾರಗಳ ವಿವರಗಳನ್ನು ಅಪ್‌ಲೋಡ್ ಮಾಡತಕ್ಕದ್ದು ಮತ್ತು ಮಂಡಳಿಯ ಲೆಕ್ಕಪರಿಶೋಧಕರ ಅನುಮೋದನೆಯ ನಂತರ ಸೇವಾ ಸಂಯೋಜಕರ ಮನವಿಯನ್ನು ಸ್ವೀಕರಿಸಿದ ತೊಂಬತ್ತು (90) ದಿನಗಳೊಳಗೆ ಮಂಡಳಿಯು ಅಂತಹ ಕ್ಷೇಮಾಭಿವೃದ್ಧಿ ಶುಲ್ಕವನ್ನು ಸರಿಹೊಂದಿಸತಕ್ಕದ್ದು ಅಥವಾ ಅದನ್ನು ಸೇವಾ ಸಂಯೋಜಕರಿಗೆ ಮರುಪಾವತಿ ಮಾಡತಕ್ಕದ್ದು.

**20. ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗೆ ಮಾಡಿದ ಪಾವತಿ ಮತ್ತು ಕಡಿತಗೊಳಿಸಲಾದ ಕ್ಷೇಮಾಭಿವೃದ್ಧಿ ಶುಲ್ಕವನ್ನು ಪ್ರತಿ ವಹಿವಾಟಿನ ಸಂಬಂಧದಲ್ಲಿ ಪಾವತಿ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆ (ಪಿಡಬ್ಲ್ಯೂಎಫ್‌ವಿಎಸ್)ಯಲ್ಲಿ**

**ದಾಖಲಿಸುವುದು.-** (1) ಪ್ರತಿಯೊಬ್ಬ ಸೇವಾ ಸಂಯೋಜಕನು ಏಳು (7) ದಿನಗಳೊಳಗೆ ಯಂತ್ರ ಓದಬಲ್ಲ ನಮೂನೆಯಲ್ಲಿ ಪರಿಶೀಲನಾ ವ್ಯವಸ್ಥೆಗೆ ಅಗತ್ಯವಿರುವ ದತ್ತಾಂಶವನ್ನು ವಿದ್ಯುನ್ಮಾನ ರೂಪದಲ್ಲಿ ಅಪ್‌ಲೋಡ್ ಮಾಡುವ ಮೂಲಕ ಮಂಡಳಿಯಿಂದ ಗೊತ್ತುಪಡಿಸಿದ ವ್ಯವಸ್ಥೆಯಲ್ಲಿ ಗಿಗ್ ಕಾರ್ಮಿಕರಿಗೆ ಮಾಡಿದ ಪಾವತಿಗಳು ಮತ್ತು ಸಂಬಂಧಪಟ್ಟ ಕ್ಷೇಮಾಭಿವೃದ್ಧಿ ಶುಲ್ಕ ಕಟಾವಣೆಗಳ ನಿರ್ದಿಷ್ಟ ವಿವರಗಳನ್ನು ದಾಖಲಿಸತಕ್ಕದ್ದು.

(2) ಪ್ರತಿಯೊಂದು ವಹಿವಾಟಿಗೆ ಸಂಬಂಧಿಸಿದ ದತ್ತಾಂಶವನ್ನು, ವಹಿವಾಟು ನಡೆದ ದಿನಾಂಕದಿಂದ ಏಳು (7) ದಿನಗಳ ಅವಧಿಯೊಳಗೆ ಸೇವಾ ಸಂಯೋಜಕರು ಗುಂಪು ಕಡತಗಳ ಭಾಗವಾಗಿ ಅಪ್‌ಲೋಡ್ ಮಾಡತಕ್ಕದ್ದು ಮತ್ತು ಅವುಗಳು ಈ ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು.-

ಎ. ಗಿಗ್ ಕಾರ್ಮಿಕರಿಗೆ ಮಂಡಳಿಯು ಸೃಜಿಸಲಾದ ವಿಶಿಷ್ಟ ಐಡಿ;

ಬಿ. ಇ-ಶ್ರಮ್ ಸಾರ್ವತ್ರಿಕ ಖಾತೆ ಸಂಖ್ಯೆ (ಯುಎಎನ್) (ಲಭ್ಯವಿದ್ದರೆ);

ಸಿ. ಮಾಡಲಾದ ಪಾವತಿ;

ಡಿ. ಜಮೆ ಮಾಡಲಾದ ಕ್ಷೇಮಾಭಿವೃದ್ಧಿ ಶುಲ್ಕ;

ಇ. ವಹಿವಾಟಿನ ದಿನಾಂಕ; ಮತ್ತು

ಎಫ್. ವೇದಿಕೆ ಗುರುತು.

(3) ಪ್ರತಿಯೊಬ್ಬ ಸೇವಾ ಸಂಯೋಜಕನು ಈ ನಿಯಮದ ಉಪ ನಿಯಮ 1 ಮತ್ತು 2 ರ ಅಡಿಯಲ್ಲಿ ಅಗತ್ಯವಿರುವಂತೆ ದತ್ತಾಂಶವನ್ನು ಸರಿಹೊಂದಿಸತಕ್ಕದ್ದು ಮತ್ತು ಪ್ರತಿ ತಿಂಗಳ ಅಂತ್ಯದಲ್ಲಿ, ಮಂಡಳಿಯು ಗೊತ್ತುಪಡಿಸಿದ ಸಿಸ್ಟಂನಲ್ಲಿ ಅದನ್ನು ಅಪ್‌ಲೋಡ್ ಮಾಡತಕ್ಕದ್ದು.

**21. ಆಂತರಿಕ ವಿವಾದ ಪರಿಹಾರ ಸಮಿತಿಯ ಸಂಯೋಜನೆ ಮತ್ತು ಕಾರ್ಯವಿಧಾನ.-** (1) ಪ್ರತಿಯೊಬ್ಬ ನೋಂದಾಯಿತ ಸೇವಾ ಸಂಯೋಜಕನು ಅಥವಾ ವೇದಿಕೆಯು ಈ ಕೆಳಗಿನಂತೆ ಆಂತರಿಕ ವಿವಾದ ಪರಿಹಾರ ಸಮಿತಿ (ಐಡಿಆರ್‌ಸಿ)ಯನ್ನು ರಚಿಸತಕ್ಕದ್ದು:-

ಎ) ಅಧ್ಯಕ್ಷರು-1 (ಹಿರಿಯ ವ್ಯವಸ್ಥಾಪನಾ ಹಂತ)

ಬಿ) ನಿರ್ವಹಣಾ ಸಿಬ್ಬಂದಿ - 2

ಸಿ) ಗಿಗ್ ಕಾರ್ಮಿಕರು - 3 ಹಿರಿಯ ಗಿಗ್ ಕಾರ್ಮಿಕರಿಗಿಂತ ಕಡಿಮೆ ಇಲ್ಲದಂತೆ

ಮೇಲಿನ ಸದಸ್ಯರಲ್ಲಿ ಕನಿಷ್ಠ ಇಬ್ಬರು ಮಹಿಳಾ ಪ್ರತಿನಿಧಿಗಳಾಗಿರತಕ್ಕದ್ದು ಮತ್ತು ಅಂತಹ ಆಂತರಿಕ ವಿವಾದ ಪರಿಹಾರ ಸಮಿತಿ (ಐಡಿಆರ್‌ಸಿ)ಗಳನ್ನು ಇತರ ಘಟಕಗಳು ಅಥವಾ ಶಾಖೆಗಳಲ್ಲಿ ಅಗತ್ಯವಿರುವಷ್ಟು ಮಟ್ಟಿಗೆ ಸ್ಥಾಪಿಸತಕ್ಕದ್ದು.

(2) ಅಧಿನಿಯಮದ 22ನೇ ಪ್ರಕರಣದ (2)ನೇ ಉಪ-ಪ್ರಕರಣಕ್ಕನುಸಾರ ಅಗತ್ಯಪಡಿಸಿದ ಆಂತರಿಕ ವಿವಾದ ಪರಿಹಾರ ಸಮಿತಿಯ (ಐಡಿಆರ್‌ಸಿ) ಮೂಲಕ ಕುಂದುಕೊರತೆಯನ್ನು ನಿವಾರಣೆ ಮಾಡುವ ಉದ್ದೇಶಗಳಿಗಾಗಿ ಪ್ರತಿಯೊಬ್ಬ ಸೇವಾ ಸಂಯೋಜಕನು ಅದನ್ನು ಖಾತರಿಪಡಿಸಿಕೊಳ್ಳತಕ್ಕದ್ದು.

(3) ಪ್ರತಿಯೊಬ್ಬ ನೋಂದಾಯಿತ ಸೇವಾ ಸಂಯೋಜಕನು ತಮ್ಮ ಅಧಿಕೃತ ಪೋರ್ಟಲ್ ಮುಖಾಂತರ ಅಥವಾ ಕೆಲವು ಸಂದರ್ಭಗಳಲ್ಲಿ ಸಂಪರ್ಕಕ್ಕಾಗಿ ಅಧಿಕೃತಗೊಳಿಸಲಾದ ವ್ಯಕ್ತಿಯ

ಮುಖಾಂತರ ಗಿಗ್ ಕಾರ್ಮಿಕರಿಗೆ ಉದ್ಭವಿಸಿದ ಎಲ್ಲಾ ಕುಂದುಕೊರತೆಗಳನ್ನು ಸ್ವೀಕರಿಸುವುದಕ್ಕಾಗಿ ಒಂದು ಆಂತರಿಕ ವಿವಾದ ಪರಿಹಾರ ಸಮಿತಿಯನ್ನು (ಐಡಿಆರ್‌ಸಿ) ಸ್ಥಾಪಿಸತಕ್ಕದ್ದು.

(4) ಆಂತರಿಕ ವಿವಾದ ಪರಿಹಾರ ಸಮಿತಿಯು (ಐಡಿಆರ್‌ಸಿ), ಕುಂದುಕೊರತೆ ನಿವಾರಣಾ ಕಾರ್ಯವ್ಯವಸ್ಥೆಗೆ ಸಂಬಂಧಿಸಿದ ವಿವರವಾದ ಕಾರ್ಯವಿಧಾನಗಳನ್ನು ತನ್ನ ಪೋರ್ಟಲ್‌ನಲ್ಲಿ ಒದಗಿಸತಕ್ಕದ್ದು ಮತ್ತು ಗಿಗ್ ಕಾರ್ಮಿಕರ ಕುಂದುಕೊರತೆಗಳನ್ನು ಪರಿಹರಿಸುವುದಕ್ಕಾಗಿ ನಿಯತವಾಗಿ ಸಭೆಗಳನ್ನು ನಡೆಸತಕ್ಕದ್ದು.

(5) ಆಂತರಿಕ ವಿವಾದ ಪರಿಹಾರ ಸಮಿತಿಯ (ಐಡಿಆರ್‌ಸಿ) ಎಲ್ಲಾ ನಿರ್ಣಯಗಳು ಲಿಖಿತದಲ್ಲಿರತಕ್ಕದ್ದು ಮತ್ತು ಸಹಜ ನ್ಯಾಯದ ತತ್ವಗಳಿಗೆ ಅನುಸಾರವಾಗಿರತಕ್ಕದ್ದು ಹಾಗೂ ಸೌಹಾರ್ದಯುತವಾಗಿ ಬಗೆಹರಿಸತಕ್ಕದ್ದು.

**22. ಅರ್ಜಿಯ ವಿಲೇವಾರಿ.-** (1) ಆಂತರಿಕ ವಿವಾದ ಪರಿಹಾರ ಸಮಿತಿಯು, ಕುಂದುಕೊರತೆಯ ದೂರನ್ನು ಸ್ವೀಕರಿಸಿದ ಕೂಡಲೇ ಕುಂದುಕೊರತೆಯ ದೂರನ್ನು ಪರಿಶೀಲನೆ ಮಾಡತಕ್ಕದ್ದು ಮತ್ತು ಕುಂದುಕೊರತೆ ದೂರನ್ನು ವಿಶ್ಲೇಷಿಸಿ ನಿರ್ಣಯಿಸಲು ಯಾವುದೇ ಹೆಚ್ಚಿನ ಸ್ಪಷ್ಟನೆಗಾಗಿ ಅಥವಾ ಅಗತ್ಯ ದಸ್ತಾವೇಜುಗಳಿಗಾಗಿ ಗಿಗ್ ಕಾರ್ಮಿಕರನ್ನು ಕರೆಯಬಹುದು. ಅಂಥ ಗಿಗ್ ಕಾರ್ಮಿಕರು ಕೋರಲಾದ ಯಾವುದೇ ಹೆಚ್ಚಿನ ಸ್ಪಷ್ಟನೆಯನ್ನು ಅಥವಾ ಅಗತ್ಯ ದಸ್ತಾವೇಜುಗಳನ್ನು ಐಡಿಆರ್‌ಸಿಗೆ ಏಳು (7) ದಿನಗಳೊಳಗೆ ನೀಡತಕ್ಕದ್ದು.

(2) ಐಡಿಆರ್‌ಸಿಯು ತೆಗೆದುಕೊಂಡ ಕ್ರಮದ ಕುರಿತಾದ ಲಿಖಿತ ವರದಿಯನ್ನು ಹದಿನಾಲ್ಕು (14) ದಿನಗಳೊಳಗಾಗಿ ದೂರುದಾರರಿಗೆ ಒದಗಿಸತಕ್ಕದ್ದು ಮತ್ತು ನಲವತ್ತೈದು (45)ದಿನಗಳೊಳಗಾಗಿ ಕುಂದುಕೊರತೆಗಳ ದೂರಿನ ಅಂತಿಮ ಆದೇಶವನ್ನು ಹೊರಡಿಸತಕ್ಕದ್ದು.

**23. ಕುಂದುಕೊರತೆ ಪರಿಹಾರ ಅಧಿಕಾರಿಯು ಅರ್ಜಿಯನ್ನು ವಿಲೆ ಮಾಡುವುದು:-**(1) ಈ ಅಧಿನಿಯಮದಡಿಯಲ್ಲಿ ನೋಂದಾಯಿತನಾದ ಗಿಗ್ ಕಾರ್ಮಿಕನು, ಅಧಿನಿಯಮದ ಅಡಿಯಲ್ಲಿ ಮಂಡಳಿಯು ಒದಗಿಸಿದ ಹಕ್ಕುಗಳು, ಸಾಮಾಜಿಕ ಭದ್ರತಾ ಪಾವತಿಗಳು ಮತ್ತು ಇತರೆ ಪ್ರಯೋಜನಗಳ ಬಗ್ಗೆ ಉದ್ಭವಿಸಿದ ಉಂಟಾದ ಯಾವುದೇ ಕುಂದುಕೊರತೆಗೆ ಸಂಬಂಧಿಸಿದಂತೆ ಕುಂದುಕೊರತೆ ಪರಿಹಾರ ಅಧಿಕಾರಿಯ ಮುಂದೆ ಖುದ್ದಾಗಿ ಅಥವಾ ವೆಬ್ ಪೋರ್ಟಲ್‌ನ ಮೂಲಕ ಅಥವಾ ಗೊತ್ತುಪಡಿಸಿದ ಯಾವುದೇ ಇತರ ವಿಧಾನದಲ್ಲಿ ಅರ್ಜಿ ಸಲ್ಲಿಸತಕ್ಕದ್ದು.

(2) ಕುಂದುಕೊರತೆಗಳ ಪರಿಹಾರ ಅಧಿಕಾರಿಯು, ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011ರ (ಕರ್ನಾಟಕ ಅಧಿನಿಯಮ ಸಂಖ್ಯೆ 2012ರ 01) ಅಡಿಯಲ್ಲಿ ಗೊತ್ತುಪಡಿಸಿದ ಕಾಲಮಿತಿಯೊಳಗೆ (1) ನೇ ಉಪ ನಿಯಮದ ಅಡಿಯಲ್ಲಿ ಸ್ವತಃ ಗಿಗ್ ಕಾರ್ಮಿಕನಿಂದ ಖುದ್ದಾಗಿ ಅಥವಾ ವೇದಿಕೆಗಳ ಮೂಲಕ ಸಲ್ಲಿಸಲಾಗಿರುವ, ಅಧಿನಿಯಮ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಗಿಗ್ ಕಾರ್ಮಿಕನಿಗೆ ಒದಗಿಸಿದ ಹಕ್ಕುಗಳು, ಸಾಮಾಜಿಕ ಭದ್ರತಾ ಪಾವತಿಗಳು ಮತ್ತು ಇತರ ಪ್ರಯೋಜನಗಳ ಕುರಿತಾಗಿ ಉದ್ಭವಿಸಿದ ಎಲ್ಲಾ ಕುಂದುಕೊರತೆಗಳನ್ನು ಪರಿಶೀಲಿಸತಕ್ಕದ್ದು ಮತ್ತು ಪರಿಹಾರವನ್ನು ನೀಡತಕ್ಕದ್ದು.

**24. ಮೇಲ್ಮನವಿಯನ್ನು ವಿಲೆ ಮಾಡುವ ವಿಧಾನ.-** (1) ಅಧಿನಿಯಮದ ೨೨ನೇ ಪ್ರಕರಣದ (10)ನೇ ಉಪ-ಪ್ರಕರಣದಡಿಯಲ್ಲಿ ಮೇಲ್ಮನವಿಯನ್ನು ಸ್ವೀಕರಿಸಿದ ಮೇಲೆ, ಮೇಲ್ಮನವಿ ಪ್ರಾಧಿಕಾರವು, ಯುಕ್ತ ಕಾನೂನು ಪ್ರಕ್ರಿಯೆಗಳನ್ನು ಅನುಸರಿಸಿ ಮತ್ತು ಸಹಜ ನ್ಯಾಯದ ಮೂಲ ತತ್ವಗಳನ್ನು ಪಾಲಿಸಿ ಹಾಗೂ ಸೂಕ್ತವಾದ ಆದೇಶಗಳನ್ನು ಹೊರಡಿಸುವ ಮೂಲಕ ತೊಂಬತ್ತು (90)ದಿನಗಳೊಳಗಾಗಿ ಮೇಲ್ಮನವಿಯನ್ನು ವಿಲೆ ಮಾಡತಕ್ಕದ್ದು.

(2) ಉಪ-ನಿಯಮ (1)ರ ಅಡಿಯಲ್ಲಿ ಮೇಲ್ಮನವಿ ಪ್ರಾಧಿಕಾರವು ಹೊರಡಿಸಿದ ಆದೇಶಗಳನ್ನು ಏಳು (7) ದಿನಗಳೊಳಗಾಗಿ ಮಂಡಳಿಗೆ ಕಳುಹಿಸತಕ್ಕದ್ದು ಮತ್ತು ಮಂಡಳಿಯು, ಅಂಥ ಆದೇಶಗಳನ್ನು ಅರವತ್ತು (60) ದಿನಗಳೊಳಗೆ ಅನುಷ್ಠಾನಗೊಳಿಸತಕ್ಕದ್ದು.

**25. ಕ್ಷೇಮಾಭಿವೃದ್ಧಿ ಶುಲ್ಕದ ಪಾವತಿ ವಿಳಂಬಕ್ಕೆ ಸಂಬಂಧಿಸಿದಂತೆ ಸೇವಾ ಸಂಯೋಜಕ ಅಥವಾ ವೇದಿಕೆಯು ಪಾವತಿಸಬೇಕಾದ ಬಡ್ಡಿಗೆ ಸಂಬಂಧಿಸಿದ ನಿಗದಿತ ಕಾಲಾವಧಿ.-** ನಿಯಮ 17ರ 2ನೇ ಉಪ-ನಿಯಮದಡಿಯಲ್ಲಿ ವಿಧಿಸಲಾದಂಥ ಸದರಿ ಕ್ಷೇಮಾಭಿವೃದ್ಧಿ ಶುಲ್ಕವನ್ನು ಪಾವತಿಸಲು ಸೇವಾ ಸಂಯೋಜಕನು ವಿಫಲನಾದರೆ, ಕ್ಷೇಮಾಭಿವೃದ್ಧಿ ಶುಲ್ಕದ ತಡ ಪಾವತಿಯ ವಿಳಂಬಕ್ಕಾಗಿ ಬಡ್ಡಿಯನ್ನು ಸಂದಾಯ ಮಾಡುವುದು ಸಂಯೋಜಕನ ಹೊಣೆಗಾರಿಕೆಯಾಗಿರತಕ್ಕದ್ದು:

ಪರಂತು, ಪಾವತಿ ವ್ಯವಸ್ಥೆಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯ (ಪಿಡಬ್ಲ್ಯೂಎಫ್‌ವಿಎಸ್) ಪೋರ್ಟಲ್‌ನ ಯಾವುದೇ ತಾಂತ್ರಿಕ ವೈಫಲ್ಯದಿಂದಾಗಿ ಸೇವಾ ಸಂಯೋಜಕನು ಇನ್ನೂ ಮೂವತ್ತು (30) ದಿನಗಳ ವಿಸ್ತರಿಸಿದ ಅವಧಿಯೊಳಗೆ ಕ್ಷೇಮಾಭಿವೃದ್ಧಿ ಶುಲ್ಕವನ್ನು ಪಾವತಿಸಲು ಸಾಧ್ಯವಾಗದಿದ್ದರೆ, ಆಗ ಸೇವಾ ಸಂಯೋಜಕನು ಬಡ್ಡಿಯನ್ನು ಪಾವತಿಸುವುದಕ್ಕೆ ಹೊಣೆಗಾರನಾಗಿರತಕ್ಕದ್ದಲ್ಲ.

**26. ಅನನುಪಾಲನೆಗಾಗಿ ವ್ಯವಹರಿಸುವ ವಿಧಾನ.-** (1) ಮಂಡಳಿಯು, ಸರ್ಕಾರದ ಪೂರ್ವಾನುಮೋದನೆ ಪಡೆದ ನಂತರ, ಅಧಿನಿಯಮದ 23ನೇ ಪ್ರಕರಣದ (3) ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಅನನುಪಾಲನೆಯ ಬಗ್ಗೆ ವ್ಯವಹರಿಸಲು "ಎ" ಗುಂಪಿಗೆ ಕಡಿಮೆಯಿಲ್ಲದ ದರ್ಜೆಯ ಒಬ್ಬ ಪತ್ರಾಂಕಿತ ಅಧಿಕಾರಿಯನ್ನು ನೇಮಿಸತಕ್ಕದ್ದು.

(2) ಅಂತಹ ಪ್ರಾಧಿಕಾರಿಯು, ಯುಕ್ತ ಕಾನೂನು ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ 23ನೇ ಪ್ರಕರಣದ ಅಡಿಯಲ್ಲಿ ಯಾವುದೇ ಜುಲ್ಮಾನೆ ಅಥವಾ ದಂಡವನ್ನು ವಿಧಿಸುವುದಕ್ಕೆ ಉಪಕ್ರಮಿಸುವ ಮುಂಚೆ ಯಾರೇ ಸಂಯೋಜಕನಿಗೆ ಅಥವಾ ವೇದಿಕೆಗೆ ಅನನುಪಾಲನೆಗಾಗಿ ಕಾರಣ ಕೇಳಿ ನೋಟಿಸ್ ಅನ್ನು ನೀಡತಕ್ಕದ್ದು ಮತ್ತು ಸೂಕ್ತ ಅವಕಾಶವನ್ನು ಒದಗಿಸತಕ್ಕದ್ದು.

**27. ದಂಡವನ್ನು ಪಾವತಿ ಮಾಡದೆ ಇರುವ ಸಂದರ್ಭದಲ್ಲಿ ವಸೂಲಿ ಮಾಡುವ ವಿಧಾನ:-** (1) ಸೇವಾ ಸಂಯೋಜಕನು ಅಥವಾ ವೇದಿಕೆಯು ಪಾವತಿಸಬೇಕಾದ ಕ್ಷೇಮಾಭಿವೃದ್ಧಿ ಶುಲ್ಕವು ಬಾಕಿಯಿದ್ದ ಸಂದರ್ಭದಲ್ಲಿ ಅಥವಾ ಅದನ್ನು ಪಾವತಿಸದಿರುವ ಸಂದರ್ಭದಲ್ಲಿ, ಮಂಡಳಿಯು ಆ ಬಗ್ಗೆ ಸೇವಾ ಸಂಯೋಜಕ ಅಥವಾ ವೇದಿಕೆಗೆ ನೋಟಿಸ್ ನೀಡತಕ್ಕದ್ದು.

(2) ಮಂಡಳಿಯು, ಎದುರು ಪಕ್ಷಕಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ನಂತರ 23ನೇ ಪ್ರಕರಣದ (4) ನೇ ಉಪಪ್ರಕರಣದ ಅಡಿಯಲ್ಲಿ ಗೊತ್ತುಪಡಿಸಲಾದಂತೆ ದಂಡವನ್ನು ವಿಧಿಸಿ ಆದೇಶವನ್ನು ಹೊರಡಿಸತಕ್ಕದ್ದು.

(3) 23ನೇ ಪ್ರಕರಣದ (4) ನೇ ಉಪಪ್ರಕರಣದ ಅಡಿಯಲ್ಲಿ ವಿಧಿಸಲಾದ ದಂಡಗಳನ್ನು ಮಂಡಳಿಯು ಆದೇಶವನ್ನು ಹೊರಡಿಸಿದ ದಿನಾಂಕದಿಂದ ಮೂವತ್ತು (30) ದಿನಗಳೊಳಗೆ ಮಂಡಳಿಯ ಖಾತೆಗೆ ಜಮೆ ಮಾಡತಕ್ಕದ್ದು.

**28. ದಂಡಗಳನ್ನು ವಿಧಿಸುವ ವಿಧಾನ.-** ಸೇವಾ ಸಂಯೋಜಕನು ಅಥವಾ ವೇದಿಕೆಯು, ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾದ ಯಾವುದೇ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿರುವ ಸಂದರ್ಭದಲ್ಲಿ ಮಂಡಳಿಯು ಆ ಬಗ್ಗೆ ಸೇವಾ ಸಂಯೋಜಕನಿಗೆ ಅಥವಾ ವೇದಿಕೆಗೆ ನೋಟಿಸ್ ನೀಡತಕ್ಕದ್ದು.

(2) ಮಂಡಳಿಯು, ಎದುರು ಪಕ್ಷಕಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ತರುವಾಯ, ಅಧಿನಿಯಮದ 23ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಗೊತ್ತುಪಡಿಸಲಾದಂತೆ ದಂಡವನ್ನು ವಿಧಿಸಿ, ಆದೇಶವನ್ನು ಹೊರಡಿಸತಕ್ಕದ್ದು.

(3) (2)ನೇ ಉಪ ಪ್ರಕರಣದ ಮೇರೆಗೆ ಹಾಗೆ ವಿಧಿಸಿದ ದಂಡವನ್ನು, ಮಂಡಲಿಯು ಆದೇಶ ಹೊರಡಿಸಿದ ಮೂವತ್ತು (30) ದಿನಗಳೊಳಗೆ ಮಂಡಳಿಯ ಖಾತೆಗೆ ಜಮೆ ಮಾಡತಕ್ಕದ್ದು.

(4) 28ನೇ ನಿಯಮದ ಮೇರೆಗೆ ಹೊರಡಿಸಲಾದ ಆದೇಶದಿಂದ ಬಾಧಿತರಾದ ಯಾರೇ ಸೇವಾ ಸಂಯೋಜಕ ಅಥವಾ ವೇದಿಕೆಯು, (2)ನೇ ಉಪ ಪ್ರಕರಣದ ಮೇರೆಗೆ ಆದೇಶವನ್ನು ಸ್ವೀಕರಿಸಿದ ಮೂವತ್ತು (30) ದಿನಗಳೊಳಗೆ ರಾಜ್ಯ ಸರ್ಕಾರವನ್ನು ಅದರ ಮರುಪರಿಶೀಲನೆ ಮಾಡುವಂತೆ ಕೋರಬಹುದು.

(5) ರಾಜ್ಯ ಸರ್ಕಾರವು, ಯುಕ್ತ ಕಾನೂನು ಪ್ರಕ್ರಿಯೆಗಳನ್ನು ಅನುಸರಿಸುವುದರ ಮೂಲಕ ವಿಚಾರಣೆಯನ್ನು ಪ್ರಾರಂಭಿಸಿದ ನಂತರ ಮೇಲ್ಮನವಿಯನ್ನು ಪರಿಗಣಿಸತಕ್ಕದ್ದು ಮತ್ತು ಯುಕ್ತ ಆದೇಶವನ್ನು ಹೊರಡಿಸತಕ್ಕದ್ದು.

**29. ಸೇವಾ ಸಂಯೋಜಕನು ಅಥವಾ ವೇದಿಕೆಯು ತ್ರೈಮಾಸಿಕ ವಿವರ ಪಟ್ಟಿಕೆಯನ್ನು ಸಲ್ಲಿಸುವ ವಿಧಾನ.**- ಅಧಿನಿಯಮದ 24ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿದಂತೆ ಸೇವಾ ಸಂಯೋಜನೆಕಾರನು ಅಥವಾ ವೇದಿಕೆಯು ಮಂಡಳಿಗೆ ತ್ರೈಮಾಸಿಕ ವಿವರಪಟ್ಟಿಕೆಯನ್ನು ಈ ಕೆಳಕಂಡ ವಿಧಾನದಲ್ಲಿ ಸಲ್ಲಿಸತಕ್ಕದ್ದು,-

ಪ್ರತಿ ತ್ರೈಮಾಸಿಕದ ಅಂತ್ಯದ ದಿನಾಂಕದಿಂದ ಮೂವತ್ತು (30) ಕೆಲಸದ ದಿನಗಳ ಅವಧಿಯೊಳಗೆ, ಈ ಅಧಿನಿಯಮದ ಮತ್ತು ನಮೂನೆ 'ಎ' ನಲ್ಲಿನ ನಿಯಮಗಳ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಅಭಿವೃದ್ಧಿಪಡಿಸಿದ ಮತ್ತು ಗೊತ್ತುಪಡಿಸಿದ ಪೋರ್ಟಲ್‌ನಲ್ಲಿ ಗಣಕಯಂತ್ರ ಓದಬಲ್ಲ ಸ್ವರೂಪದಲ್ಲಿ ವಿದ್ಯುನ್ಮಾನ ರೂಪದಲ್ಲಿ ತ್ರೈಮಾಸಿಕ ರಿಟರ್ನ್‌ಗಳನ್ನು ಅಪ್‌ಲೋಡ್ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಪ್ರವೀಣ ಕುಮಾರ ಹಣ್ಣಿ**
ಪೀಠಾಧಿಕಾರಿ-3,
ಕಾರ್ಮಿಕ ಇಲಾಖೆ.

## ನಮೂನೆ-ಎ
## (24ನೇ ಪ್ರಕರಣವನ್ನು ನೋಡಿ, 29ನೇ ನಿಯಮದ ಸಹವಾಚನದೊಂದಿಗೆ)

**ಭಾಗ ಎ:**

| | | |
|---|---|---|
| 1. | ಕಂಪನಿ ಹೆಸರು:<br>ಸೇವಾ ಸಂಯೋಜಕ/ವೇದಿಕೆ | |
| 2. | ಬ್ರಾಂಡ್ ಹೆಸರು:<br>ಸೇವಾ ಸಂಯೋಜಕ/ವೇದಿಕೆ | |
| 3. | ವರದಿ ಮಾಡುವ ಅವಧಿ<br>1ನೇ ತ್ರೈಮಾಸಿಕ (ಜನವರಿ-ಮಾರ್ಚ್) | |
| | 2ನೇ ತ್ರೈಮಾಸಿಕ (ಏಪ್ರಿಲ್-ಜೂನ್) | |
| | 3ನೇ ತ್ರೈಮಾಸಿಕ (ಜುಲೈ-ಸೆಪ್ಟೆಂಬರ್) | |
| | 4ನೇ ತ್ರೈಮಾಸಿಕ (ಅಕ್ಟೋಬರ್-ಡಿಸೆಂಬರ್) | |
| 4. | ಸಲ್ಲಿಕೆ ದಿನಾಂಕ | |
| 5. | ನೋಂದಾಯಿತ ವಿಳಾಸ | |
| 6. | ಸಿಐಎನ್: <ನೋಂದಾಯಿಸಲಾದಂತೆ> | |
| 7. | ಪಿಎಎನ್: <ನೋಂದಾಯಿಸಲಾದಂತೆ> | |
| 8. | ಜಿ.ಎಸ್.ಟಿ:<br><ನೋಂದಾಯಿಸಲಾದಂತೆ> | |

**ಭಾಗ- ಬಿ:**

| ಪ್ರವರ್ಗ | ಒಟ್ಟು ನೋಂದಾಯಿತ ಗಿಗ್/ವೇದಿಕೆ ಕಾರ್ಮಿಕರು (ಸಂಚಿತ) | ಸಕ್ರಿಯರಾಗಿರುವ ಗಿಗ್/ ವೇದಿಕೆ ಕಾರ್ಮಿಕರ ಸಂಖ್ಯೆ | ನಿಷ್ಕ್ರಿಯರಾಗಿರುವ ಗಿಗ್ / ವೇದಿಕೆ ವೇದಿಕೆ ಕಾರ್ಮಿಕರ ಸಂಖ್ಯೆ (ತ್ರೈಮಾಸಿಕ ಅವಧಿಯಲ್ಲಿ) | ಪ್ರತೀ ಕಾರ್ಮಿಕನ ಸರಾಸರಿ ಕೆಲಸದ ದಿನಗಳು (ತ್ರೈಮಾಸಿಕ ಅವಧಿಯಲ್ಲಿ) | ಒಟ್ಟು ಪಾವತಿ ಮೊತ್ತ | ಸರ್ಕಾರಿ ಆದೇಶದ ಅನ್ವಯ ಪಾವತಿಸಬೇಕಾದ ಒಟ್ಟು ವಂತಿಗೆ (ರೂ.ಗಳಲ್ಲಿ) | ವಂತಿಗೆ ಠೇವಣಿ (ದಿನಾಂಕ ಮತ್ತು ಉಲ್ಲೇಖ ಸಂಖ್ಯೆ) | ಯಾವುದೇ ಬಾಕಿಗಳು/ ಬಾಕಿ ಇರುವ ವಂತಿಗೆಗಳು (ಯಾವುದಾದರೂ ಇದ್ದಲ್ಲಿ) | ಷರಾ/ ವಿವರಣೆಗಳು |
|---|---|---|---|---|---|---|---|---|---|
| ಆಹಾರ & ದಿನಸಿ ತಲುಪಿಸುವ ಸೇವೆ & ಇತರೆ ಅದೇ ವಿಧದ ಸೇವಾ ಸಂಸ್ಥೆಗಳು | | | | | | | | | |
| ರೈಡ್ ಹೇಲಿಂಗ್-ಎಸ್ಎಎಸ್ ಮಾದರಿಯನ್ನು ಒಳಗೊಂಡ 2ಡ್ಲ್ಯೂ | | | | | | | | | |
| ರೈಡ್ ಹೇಲಿಂಗ್-ಎಸ್ಎಎಸ್ ಮಾದರಿಯನ್ನು ಒಳಗೊಂಡ 3ಡ್ಲ್ಯೂ | | | | | | | | | |
| ರೈಡ್ ಹೇಲಿಂಗ್-ಎಸ್ಎಎಸ್ ಮಾದರಿಯನ್ನು ಒಳಗೊಂಡ 4ಡ್ಲ್ಯೂ | | | | | | | | | |
| ಸರಕು ಸಾಗಾಣಿಕೆ ಸೇವೆಗಳು -2ಡಬ್ಲ್ಯೂ | | | | | | | | | |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | | | | | | |
|---|---|---|---|---|---|---|---|---|
| ಸರಕು ಸಾಗಾಣಿಕೆ ಸೇವೆಗಳು -3ಡಬ್ಲ್ಯೂ ಕಾರ್ಗೋ | | | | | | | | |
| ಸರಕು ಸಾಗಾಣಿಕೆ ಸೇವೆಗಳು -ಎಲ್.ಸಿ.ವಿ. | | | | | | | | |
| ಸರಕು ಸಾಗಾಣಿಕೆ ಸೇವೆಗಳು -ಎಚ್.ಸಿ.ವಿ. | | | | | | | | |
| ಸರಕು ಸಾಗಾಣಿಕೆ ಸೇವೆಗಳು (ವಾಹನ ಪ್ರವರ್ಗಗಳನ್ನು ಲೆಕ್ಕಿಸದೆ), ಅನ್ವಯವಾದ ಲ್ಲಿ | | | | | | | | |
| ಗೃಹ ಸೇವೆಗಳನ್ನು ಒಳ ಗೊಂಡಂತೆ ವೃತ್ತಿಪರ ಸೇವೆ ಗಳನ್ನು ಒದಗಿಸುವವರು | | | | | | | | |
| ಆರೋಗ್ಯ ಸೇವೆ | | | | | | | | |
| ಪ್ರಯಾಣ ಮತ್ತು ಆತಿಥ್ಯ | | | | | | | | |
| ಮಾಹಿತಿ ಮತ್ತು ಮಾಧ್ಯಮ ಸೇವೆಗಳು | | | | | | | | |
| ಸಗಟು/ಚಿಲ್ಲರೆ ವ್ಯಾಪಾರ ಕ್ಕಾಗಿ ಮಾರುಕಟ್ಟೆ ಸ್ಥಳ (ಬಿ2ಬಿ/ಬಿ2ಸಿ) | | | | | | | | |
| ಉಗ್ರಾಣ | | | | | | | | |
| ಪ್ರವರ್ಗದಲ್ಲಿಲ್ಲದ ಯಾವು ದೇ ಇತರೆ | | | | | | | | |

**ಭಾಗ-ಸಿ:**

| | | |
|---|---|---|
| 1. | ತ್ರೈಮಾಸಿಕ ಅವಧಿಯಲ್ಲಿ ಟರ್ಮಿನೇಷನ್‌ಗಳ ಸಂಖ್ಯೆ | |
| 2. | ಯುಕ್ತ ಕೆಲಸದ ವಿಸ್ತರಿತ ಷರತ್ತುಗಳು | |
| 3. | ಒದಗಿಸಲಾದ ಸಾಮಾಜಿಕ ಭದ್ರತಾ ಯೋಜನೆಗಳು, ಯಾವುದಾದರೂ ಇದ್ದಲ್ಲಿ: | |
| 4. | ವಿಸ್ತರಿಸಲಾದ ತರಬೇತಿ/ಕೌಶಲ್ಯಾಭಿವೃದ್ಧಿ | |
| 5. | ಅಪಘಾತಗಳ ಸಂಖ್ಯೆ (ತ್ರೈಮಾಸಿಕ ಅವಧಿಯಲ್ಲಿ ಮಾರಣಾಂತಿಕ/ ಮರಣಾಂತಿಕವಲ್ಲದ ಎರಡೂ) | |
| 6. | ಐ.ಡಿ.ಆರ್.ಸಿ. ಸ್ಥಾಪನೆಯ ವಿವರಗಳು | |
| 7. | ತ್ರೈಮಾಸಿಕ ಅವಧಿಯಲ್ಲಿ ನಿರ್ವಹಿಸಲಾದ ಕುಂದುಕೊರತೆ ದೂರುಗಳ ಸಂಖ್ಯೆ | |
| 8. | ಮಂಡಳಿಯ ಮುಂದೆ ಸಲ್ಲಿಸಲಾದ ಮೇಲ್ಮನವಿಗಳ ಸಂಖ್ಯೆ | |
| 9. | ಸ್ವಯಂಚಾಲಿತವಾಗಿ ಮೇಲ್ವಿಚಾರಣೆ ಮತ್ತು ನಿರ್ಧಾರ ಕೈಗೊಳ್ಳುವ ವ್ಯವಸ್ಥೆ ಇದೆಯೇ? | |
| 10. | ಬಹಿರಂಗಪಡಿಸುವಿಕೆಯ ಬಾಧ್ಯತೆಯನ್ನು ಅಧಿನಿಯಮ ಮತ್ತು ನಿಯಮಗಳಿಗನುಗುಣವಾಗಿ ಪ್ರಕಟಿಸಲಾಗಿದೆಯೇ | |

**ಸ್ಥಳ:**

**ದಿನಾಂಕ:** **ಅಧಿಕೃತಗೊಳಿಸಿದ ವ್ಯಕ್ತಿಯ ಸಹಿ**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH